
ಸಂಪುಟ/Volume : 45
ಸಂಚಿಕೆ/Issue : 4
ಪುಟ/Pages : 12
ಬೆಲೆ/Price : ₹ 10/–

# ಅಖಿಲ ಕರ್ನಾಟಕ ಶಿಕ್ಷಕ ಸಮಾಚಾರ

ಜನವರಿ 2022 ಮಾಸ ಪತ್ರಿಕೆ

## Akhila Karnataka Shikshaka Samachar | January 2022 | Monthly




A Journal of Karnataka Rajya Madhyamika Shikshaka Sangha (R.)

## ಸ್ವಾಮಿ ವಿವೇಕಾನಂದರು ಇಂದೇಕೆ ಪ್ರಸ್ತುತ?

ಪ್ರೀತಿಯ ಓದುಗರೆಲ್ಲರಿಗೂ ಸ್ವಾಮಿ ವಿವೇಕಾನಂದರ ಜನ್ಮಜಯಂತಿಯ ಶುಭಾಶಯಗಳು. ನಮಗೂ ನಿಮಗೂ ತಿಳಿದಿರುವಂತೆ ಮಹಾನ್ ವ್ಯಕ್ತಿಗಳ ಜನ್ಮಜಯಂತಿಯನ್ನು ಆಚರಿಸುವ ಉದ್ದೇಶವೇ ಅವರ ಜೀವನ ಮತ್ತು ಉತ್ತಮ ಕಾರ್ಯವನ್ನು ತಿಳಿದುಕೊಳ್ಳುವುದು. ಸ್ವಾಮಿ ವಿವೇಕಾನಂದರ ಜೀವನ ಚರಿತ್ರೆಯನ್ನು ಓದಿದಾಗ ಅವರ ಬಾಲ್ಯದಲ್ಲಿ ಅವರ ಏಕಾಗ್ರತೆ ಹೇಗಿತ್ತು ಎನ್ನುವುದು ತಿಳಿಯುತ್ತದೆ. ವಿದ್ಯಾರ್ಥಿ ಜೀವನದಲ್ಲಿ ಗೆಳೆಯರೊಂದಿಗೆ ಮಾತನಾಡಿಕೊಂಡೆ ಶಿಕ್ಷಕರ ಪಾಠವನ್ನು ಕೇಳಿಸಿಕೊಂಡು ಶಿಕ್ಷಕರು ಕೇಳಿದ ಪ್ರಶ್ನೆಗಳಿಗೆ ಉತ್ತರಿಸುವ ಮೂಲಕ ಏಕಾಗ್ರತೆಯ ಉದಾಹರಣೆಯನ್ನು ನೀಡಿದರು. ಇಂದು ನಮ್ಮ ಶಾಲೆಯಲ್ಲಿರುವ ವಿದ್ಯಾರ್ಥಿಗಳಲ್ಲಿ ಏಕಾಗ್ರತೆಯ ಕೊರತೆಯನ್ನು ಕಾಣುತ್ತಿದ್ದೇವೆ. ಆದ್ದರಿಂದ ಸ್ವಾಮಿ ವಿವೇಕಾನಂದರ ಜೀವನಚರಿತ್ರೆಯನ್ನು ಹೇಳುವುದರ ಮೂಲಕ ವಿದ್ಯಾರ್ಥಿ ಜೀವನದಲ್ಲಿ ಏಕಾಗ್ರತೆಯನ್ನು ಹೇಗೆ ಸಾಧಿಸಬೇಕು ಎಂಬುದನ್ನು ಮತ್ತು ಇನ್ನೂ ಅನೇಕ ಮೌಲ್ಯಗಳನ್ನು ಕಲಿಸಬೇಕು.

ಸುಭಾಷ್‌ಚಂದ್ರಬೋಸರ ಜಯಂತಿಯನ್ನು ಜನವರಿ 23ರಂದು ನಾವು ನೀವೆಲ್ಲಾ ಆಚರಿಸಿದ್ದೇವಲ್ಲವೇ? ಈ ಮಹಾನ್ ವ್ಯಕ್ತಿಯೂ ಕೂಡ ಇಂದು ಅತ್ಯಂತ ಪ್ರಸ್ತುತ. ವಿದ್ಯಾರ್ಥಿಗಳಲ್ಲಿ ದೇಶಭಕ್ತಿಗಿಂತ ಸ್ವಭಕ್ತಿ ಹೆಚ್ಚುತ್ತಿರುವುದು ಕಂಡುಬರುತ್ತಿದೆ. ಸುಭಾಷ್‌ಚಂದ್ರ ಬೋಸರ ಜನ್ಮದಿನವನ್ನು ಆಚರಿಸುವುದರ ಮೂಲಕ ದೇಶಭಕ್ತಿಯ ಬಗ್ಗೆ ತಿಳಿಸುವುದು ಮುಖ್ಯವಾಗುತ್ತದೆ. ಸುಭಾಷ್‌ಚಂದ್ರಬೋಸರ ಗಟ್ಟಿತನ ದೇಶಕ್ಕಾಗಿ ತಮ್ಮ ಜೀವನವನ್ನೇ ಮುಡುಪಾಗಿಟ್ಟ ರೀತಿ ಅನನ್ಯ ಎಂಬುದನ್ನು ತಿಳಿಸಬೇಕು.

ಕೇವಲ ವಿದ್ಯಾರ್ಥಿಗಳಿಗೆ ಇವರ ಜೀವನ ಮೌಲ್ಯಗಳನ್ನು ತಿಳಿಸಿದರೆ ಸಾಲದು ಈ ಮಹಾನ್ ನಾಯಕರ ಜನ್ಮಜಯಂತಿಯ ಮಧ್ಯೆ ಅಂದರೆ ಜನವರಿ 12ರಿಂದ ಜನವರಿ 23ರ ಒಳಗೆ ಕರ್ನಾಟಕ ರಾಜ್ಯ ಮಾಧ್ಯಮಿಕ ಶಿಕ್ಷಕ ಸಂಘವು ಕರ್ತವ್ಯ ಬೋಧ ದಿವಸವನ್ನು ಆಚರಿಸುತ್ತದೆ. ಕಾರಣ ಶಿಕ್ಷಕರೆಲ್ಲರೂ ಈ ಮಹಾನ್ ವ್ಯಕ್ತಿಗಳ ಜೀವನದಿಂದ ಪ್ರೇರಣೆ ಪಡೆದು ತಮ್ಮ ಕರ್ತವ್ಯದ ಕಡೆ ಹೆಚ್ಚು ಕೇಂದ್ರಿಕೃತರಾಗಬೇಕು ಎನ್ನುವ ಉದ್ದೇಶ ಹೊಂದಿದೆ. ಶಿಕ್ಷಕರು ತಮ್ಮ ಹಕ್ಕುಗಳ ಬಗ್ಗೆಯೇ ಮಾತನಾಡುವುದನ್ನು ಬಿಟ್ಟು ಕರ್ತವ್ಯದ ಬಗ್ಗೆ ಜಾಗೃತರಾಗಬೇಕು. ಈ ಎಲ್ಲಾ ಕಾರಣದಿಂದಲೇ ಅಖಿಲ ಭಾರತೀಯ ರಾಷ್ಟ್ರೀಯ ಶೈಕ್ಷಿಕ ಮಹಾಸಂಘವು ತನ್ನ ವಾರ್ಷಿಕ ಪ್ರಮುಖ ನಾಲ್ಕು ಕಾರ್ಯಕ್ರಮಗಳಲ್ಲಿ ಕರ್ತವ್ಯ ಬೋಧ ದಿವಸವನ್ನು ಆಚರಿಸುತ್ತಿದೆ. ಬನ್ನಿ ನಾವು ನೀವೆಲ್ಲರೂ ಈ ಮಹಾನ್ ವ್ಯಕ್ತಿಗಳ ಜೀವನಚರಿತ್ರೆಯನ್ನು ಓದಿ, ನಮ್ಮ ಜ್ಞಾನಭಂಡಾರವನ್ನು ಹೆಚ್ಚಿಸಿಕೊಳ್ಳುತ್ತಾ ಕರ್ತವ್ಯನಿರತರಾಗೋಣ.

– – –

ದಿನಾಂಕ 20.01.2023ರಂದು ಕರ್ನಾಟಕ ರಾಜ್ಯ ಮಾಧ್ಯಮಿಕ ಶಿಕ್ಷಕ ಸಂಘದ ಪ್ರಮುಖರು ಶಿಕ್ಷಣ ಮಂತ್ರಿಗಳಾದ ಶ್ರೀ ನಾಗೇಶ್‌ಜೀಯವರನ್ನು ಭೇಟಿ ಮಾಡಿತು. ಶಿಕ್ಷಣ ಮತ್ತು ಶಿಕ್ಷಕರಿಗೆ ಸಂಬಂಧಿಸಿದ ಅನೇಕ ಬೇಡಿಕೆಗಳನ್ನು ಕುರಿತು ಮನವಿ ಸಲ್ಲಿಸಲಾಯಿತು. ಸಂತೋಷದ ವಿಚಾರವೆಂದರೆ ಅವರನ್ನು ಭೇಟಿ ಮಾಡಿದ ಮರುದಿನವೇ ನಮ್ಮ ಪ್ರಮುಖ ಬೇಡಿಕೆಯಾದ ಅನುದಾನಿತ ಶಿಕ್ಷಕರಿಗೆ ಸಂಬಂಧಿಸಿದ ಬೇಡಿಕೆ ಈಡೇರಿಕೆಗಾಗಿ ಕ್ರಮಕೈಗೊಳ್ಳಲು ಒಂದು ಸಮಿತಿಯನ್ನು ರಚಿಸಿತು. ಅತ್ಯಂತ ಪ್ರಮುಖ ಬೇಡಿಕೆಯಾದ ಹೆಚ್ಚುವರಿ ಶಿಕ್ಷಕರ ವರ್ಗಾವಣೆಯನ್ನು ಸ್ಥಗಿತಗೊಳಿಸಿತು. ಕರ್ನಾಟಕ ರಾಜ್ಯ ಮಾಧ್ಯಮಿಕ ಶಿಕ್ಷಕ ಸಂಘವು ಶಿಕ್ಷಣ ಮಂತ್ರಿಗಳಿಗೆ ಈ ಮೂಲಕ ಧನ್ಯವಾದ ಅರ್ಪಿಸುತ್ತದೆ.

ಸಂಪಾದಕ


## ಸಂಪಾದಕ ಮಂಡಳಿ

ಗೌರವ ಸಂಪಾದಕರು
ಹೆಚ್. ನಾಗಭೂಷಣರಾವ್

ಪ್ರಧಾನ ಸಂಪಾದಕರು ಮತ್ತು ಪ್ರಕಾಶಕರು
ಜೆ. ಎಮ್. ಜೋಶಿ

ವ್ಯವಸ್ಥಾಪಕ ಸಂಪಾದಕರು
ಸಂದೀಪ ಬೂದಿಹಾಳ

ಗೌರವ ಸಲಹೆಗಾರರು
ಚಿದಾನಂದ ಆ. ಪಾಟೀಲ
ಮಮತಾ ಡಿ. ಕೆ.

ಸಂಪಾದಕ ಮಂಡಳಿ
ಎನ್. ನಾಗರಾಜ್
ನಂ. ನಾಗಲಕ್ಷ್ಮಿ
ಸೀತಾಲಕ್ಷ್ಮಿ ಆರ್.

ವಿನ್ಯಾಸಕಾರರು
ಪ್ರೇರಣಾ

ಕಛೇರಿ ವ್ಯವಸ್ಥಾಪಕರು
ವರಲಕ್ಷ್ಮಿ ಕೆ. ಎನ್.


## ಪರಿವಿಡಿ


- ಶಿಕ್ಷಣ ತಜ್ಞ ಡಾ॥ ಹೆಚ್. ಎನ್. 3
- ಸಂಭ್ರಮದ ಗಣರಾಜ್ಯೋತ್ಸವ 4
- ಅಂಬಾಬಾಯಿ– ಕನ್ನಡದ ಮೊಟ್ಟಮೊದಲ ಮಹಾಕಾವ್ಯ ಬರೆದ ಕನ್ನಡತಿ 5
- ನಮಾಮಿ ಭಾರತ 6
- ವೇದವಿಜ್ಞಾನ ಗುರುಕುಲಮ್ 7
- ಶಿಕ್ಷಣ ಸಚಿವರಿಗೆ ಮನವಿ 9
- ಕರ್ನಾಟಕ ಸರ್ಕಾರದ ನಡವಳಿಗಳು 10
- ಕರ್ತವ್ಯ ಬೋಧ ದಿನ 11
- ಚಿತ್ರ ಸುದ್ದಿ 12

# ಶಿಕ್ಷಣ ತಜ್ಞ ಡಾ॥ ಹೆಚ್. ಎನ್.

**ಹೆಚ್. ನಾಗಭೂಷಣ್ ರಾವ್**
**ಪೋಷಕರು**
**ಕರ್ನಾಟಕ ರಾಜ್ಯ ಮಾಧ್ಯಮಿಕ ಶಿಕ್ಷಕ ಸಂಘ**



ಇಂದು ಸಮಾಜಸೇವಕ, ಧೀಮಂತ ಮುಂತಾದ ಶಬ್ದಗಳು ತಮ್ಮ ನೈಜ ಅರ್ಥ ಕಳೆದುಕೊಂಡು ಅಪಭ್ರಂಶಗೊಂಡಿವೆ. ಅದೇ ಪಟ್ಟಿಗೆ ಸೇರಿದ್ದು 'ಶಿಕ್ಷಣ ತಜ್ಞ' ಎಂಬ ಪದ. ಶಿಕ್ಷಣದ ವ್ಯಾಪಾರೀಕರಣದ ಈ ಕಾಲದಲ್ಲಿ ಶಿಕ್ಷಣದ ಸಂಸ್ಥೆ ನಡೆಸುವವರೆಲ್ಲರೂ ಶಿಕ್ಷಣತಜ್ಞರೇ! ಪತ್ರಿಕೆಗಳಲ್ಲಿ ಶಿಕ್ಷಣಕ್ಕೆ ಸಂಬಂಧಿಸಿದ ವರದಿ ಓದುವಾಗ ಈ ಮಾತು ಅರಿವಿಗೆ ಬರುತ್ತದೆ.

ಶಿಕ್ಷಣ ತಜ್ಞರೆಂದರೆ, "ಶಿಕ್ಷಣದ ಅರ್ಥ ತಿಳಿದು ಅದನ್ನು ವಿದ್ಯಾರ್ಥಿಗಳಿಗೆ ನೀಡುವ ರೀತಿಯನ್ನು ಅರ್ಥಮಾಡಿಕೊಂಡು ಆಳವಾಗಿ ಚಿಂತಿಸಿ ಕಾಲಕಾಲಕ್ಕೆ ಅವಶ್ಯವಾದ ಬದಲಾವಣೆ, ಹೊಸತನ್ನು ನೀಡುವ ಸಾಮರ್ಥ್ಯ ಇದ್ದು, ಶಿಕ್ಷಣಕ್ಕೆ ತನ್ನನ್ನು ಸಮರ್ಪಿಸಿಕೊಂಡ ವ್ಯಕ್ತಿ" ಈ ಅರ್ಥದಲ್ಲಿ ನೈಜ ಶಿಕ್ಷಣ ತಜ್ಞರೆಂದರೆ ಡಾ॥ ಎಚ್. ನರಸಿಂಹಯ್ಯನವರು. ಎಲ್ಲರಿಗೂ ಹೆಚ್.ಎನ್ ಎಂದೇ ಪರಿಚಿತರು.

ಹೆಚ್. ಎನ್ ಜನ್ಮ ತಳೆದದ್ದು ಗೌರೀಬಿದನೂರು ತಾಲ್ಲೂಕಿನಲ್ಲಿರುವ ಒಂದು ಕುಗ್ರಾಮ ಹೊಸೂರಿನಲ್ಲಿ 1920ರ ಜೂನ್ ಆರರಂದು. ತಂದೆ ಹನುಮಂತಪ್ಪ, ತಾಯಿ ವೆಂಕಟಮ್ಮ ಅತಿ ಹಿಂದುಳಿದ ಬಡ ಕುಟುಂಬ. ಬೆನ್ನುಗಂಟಿಬಂದ ಬಡತನ. ಪ್ರಾಥಮಿಕ ಮತ್ತು ಮಾಧ್ಯಮಿಕ ಶಿಕ್ಷಣವನ್ನು ಹೊಸೂರಿನಲ್ಲೇ ಮುಗಿಸಿದರು. ಶಾಲಾಶಿಕ್ಷಕರ ಪ್ರೇರಣೆ ಪ್ರೋತ್ಸಾಹದಿಂದ ತಮ್ಮ ಜ್ಞಾನದ ಹಸಿವು ಇಂಗಿಸಲು ಬೆಂಗಳೂರು ಸೇರಲು ನಿರ್ಧಾರ. ಕೈಯಲ್ಲಿ ಬಿಡಿಕಾಸಿಲ್ಲ. ಹೊಸೂರಿನಿಂದ ಬೆಂಗಳೂರಿಗೆ 60 ಕಿಲೋಮೀಟರ್ ನಡೆದೇ ಬಂದು 1935ರಲ್ಲಿ ಅವರ ಗಮ್ಯಸ್ಥಾನ ದೇಶೀಯ ವಿದ್ಯಾಶಾಲಾ ಇಂದಿನ ನ್ಯಾಷನಲ್ ಹೈಸ್ಕೂಲ್ ತಲುಪಿದರು. ಅಲ್ಲಿದ್ದ ಅಧ್ಯಾಪಕರು ಕರುಣಾಳುಗಳು, ಶಿಷ್ಯಾಭಿಮಾನಿಗಳು, ಪುತ್ರವಾತ್ಸಲ್ಯದಿಂದ ಬಾಲಕ ನರಸಿಂಹಯ್ಯನನ್ನು 8ನೇ ತರಗತಿಗೆ ಸೇರಿಸಿಕೊಂಡು ಅವರು ನಡೆಸುತ್ತಿದ್ದ 'Poor boys home' ಗೆ ಸೇರಿಸಿಕೊಂಡರು.

1936 ಗಾಂಧೀಜಿ ಬೆಂಗಳೂರಿಗೆ ಬಂದದ್ದು ನ್ಯಾಷನಲ್ ಹೈಸ್ಕೂಲು ಮೈದಾನದಲ್ಲಿ ಅವರ ಭಾಷಣ. ಹಿಂದಿ ಭಾಷಣವನ್ನು ಕನ್ನಡಕ್ಕೆ ತರ್ಜುಮೆ ಮಾಡಿದ್ದೂ 16 ವರ್ಷದ ಬಾಲಕ ನರಸಿಂಹಯ್ಯ. ಗಾಂಧೀಜಿ ಅವನ ಹೆಗಲಮೇಲೆ ಕೈಯಿಟ್ಟು ನಡೆದರು. ಗಾಂಧೀಜಿ ಜತೆ ಹತ್ತು ಹೆಜ್ಜೆ ಹಾಕಿದ ಬಾಲಕ ಜೀವನಪೂರ್ತಿ ಅವರು ನಡೆದ ಹಾದಿಯಲ್ಲಿ ನಡೆಯುವ ಸಂಕಲ್ಪ ಮಾಡಿದ ಅಂತೆಯೇ ನಡೆದ.

ಹೈಸ್ಕೂಲು ಶಿಕ್ಷಣ ಮುಗಿಸಿ, ಸೆಂಟ್ರಲ್ ಕಾಲೇಜಿನಲ್ಲಿ ಭೌತಶಾಸ್ತ್ರದಲ್ಲಿ ಬಿ.ಎಸ್ಸಿ ಆನರ್ಸ್ ಮಾಡುತ್ತಿರುವಾಗಲೇ, 1942ರಲ್ಲಿ ಗಾಂಧೀಜಿ 'ಕ್ವಿಟ್ ಇಂಡಿಯಾ' ಕರೆನೀಡಿದರು. ನರಸಿಂಹಯ್ಯ ಓದುವುದನ್ನು ಅರ್ಧಕ್ಕೆ ಬಿಟ್ಟು ಚಳುವಳಿಯಲ್ಲಿ ಭಾಗವಹಿಸಿ, ಜೈಲು ಸೇರಿದ. ಬಿಡುಗಡೆಯ ನಂತರ ಓದನ್ನು ಮುಂದುವರೆಸಿ ಭೌತಶಾಸ್ತ್ರದಲ್ಲಿ ಎಂಎಸ್ಸಿ ಪದವಿ ಪಡೆದು ಅಮೆರಿಕೆಯ ಓಹಿಯೋ ವಿಶ್ವವಿದ್ಯಾಲಯದಿಂದ ನ್ಯೂಕ್ಲಿಯರ್ ಫಿಸಿಕ್ಸ್‌ನಲ್ಲಿ ಡಾಕ್ಟರೇಟ್ ಪದವಿ ಗಳಿಸಿ ಭಾರತಕ್ಕೆ ಬಂದ ನಂತರ, ಅನೇಕ ಸಂಸ್ಥೆಗಳು ಅವರನ್ನು ಕೈಬೀಸಿ ಕರೆಯುತ್ತಿದ್ದವು. ಆದರೆ ತಾನು ಕಲಿತ ಶಾಲೆಯ ಋಣತೀರಿಸಲೆಂದೇ ನ್ಯಾಷನಲ್ ಕಾಲೇಜಿನಲ್ಲೇ ಪ್ರಾಧ್ಯಾಪಕರಾಗಿ, ಪ್ರಾಂಶುಪಾಲರಾಗಿ ನಂತರ 1972ರಿಂದ 77ರವರೆಗೆ ಬೆಂಗಳೂರು ವಿಶ್ವವಿದ್ಯಾಲಯದ ಉಪಕುಲಪತಿಗಳಾಗಿ ಕಾರ್ಯನಿರ್ವಹಿಸಿದರು.

### ಪ್ರಾಂಶುಪಾಲರಾಗಿ

12 ವರ್ಷ ನ್ಯಾಷನಲ್ ಕಾಲೇಜಿನ ಪ್ರಾಂಶುಪಾಲರಾಗಿ ಅವರು ಮಾಡಿದ ಉಪಕ್ರಮ ಒಂದೆರೆಡಲ್ಲ. "ಶಿಕ್ಷಣ ಎಂದರೆ ಪುಸ್ತಕದ ಬದನೆಕಾಯಿಯನ್ನು ವಿದ್ಯಾರ್ಥಿಯ ತಲೆಯಲ್ಲಿ ತುರುಕಿ ಬೇಯಿಸುವುದಲ್ಲ. ಅವನ ಸರ್ವಾಂಗೀಣ ಬೆಳವಣಿಗೆಯೇ ಶಿಕ್ಷಣ" ಇದು ಅವರ ನಿಲುವು. ಇದಕ್ಕಾಗಿ ಸಂಗೀತ, ಸಾಹಿತ್ಯ, ನಾಟಕ ಮುಂತಾದ ಕಲೆಗಳನ್ನು ವಿದ್ಯಾರ್ಥಿಗಳಲ್ಲಿ ಬೆಳೆಸಲು ವಿಶೇಷ ಗಮನಕೊಟ್ಟರು. ಇಂದು ಈ ಎಲ್ಲ ಕ್ಷೇತ್ರಗಳಲ್ಲಿ ಖ್ಯಾತನಾಮರಾದ ಅನೇಕ ಕಲಾವಿರು ನ್ಯಾಷನಲ್ ಹೈಸ್ಕೂಲು, ಕಾಲೇಜುಗಳೇ ನಮಗೆ 'Spring Board' ಆಗಿದ್ದು ಎಂದು ನೆನೆಸುತ್ತಾರೆ.

ಹೆಚ್.ಎನ್ ಪ್ರಾಂಶುಪಾಲರಾಗಿದ್ದಾಗಲೇ ಬಡ ವಿದ್ಯಾರ್ಥಿಗಳಿಗೆ ಮಧ್ಯಾಹ್ನದ ಊಟ, ತಾಂತ್ರಿಕ ತರಬೇತಿ, ವ್ಯಾಯಾಮ ಶಾಲೆ, ದೈಹಿಕ ಶಿಕ್ಷಣ ಮುಂತಾದವುಗಳೆಲ್ಲದಕ್ಕೂ ವಿಶೇಷ ಗಮನಕೊಟ್ಟರು. ಸ್ವತಃ ಮೈದಾನದಲ್ಲಿ ವಾಲಿಬಾಲ್, ಬ್ಯಾಟ್‌ಮಿಟನ್ ಮುಂತಾದ ಆಟಗಳನ್ನು ವಿದ್ಯಾರ್ಥಿಗಳೊಂದಿಗೆ ಆಡಿ ಅವರಲ್ಲಿ ಸ್ಫೂರ್ತಿ ತುಂಬುತ್ತಿದ್ದರು. ವಿದ್ಯಾರ್ಥಿಗಳಿಗೇ ಅಲ್ಲದೆ ಸಾರ್ವಜನಿಕರಿಗೂ ವಿಜ್ಞಾನದಲ್ಲಿ ಆಸಕ್ತಿ ಮೂಡಿಸಲು 'ಬೆಂಗಳೂರು ಸೈನ್ಸ್ ಫೋರಂ' ಅನ್ನು ಪ್ರಾರಂಭಿಸಿ ಪ್ರತಿಕಾರ ವಿಷಯ ಪರಿಣಿತರಿಂದ ಭಾಷಣ ಏರ್ಪಡಿಸುತ್ತಿದ್ದರು. ಇಷ್ಟೇ ಅಲ್ಲ, ಬೆಂಗಳೂರು 'ಸೋಷಿಯಲ್ ಸೈನ್ಸ್ ಫೋರಂ', 'ಬೆಂಗಳೂರು ಲಲಿತ ಕಲಾ ಪರಿಷತ್' ಮುಂತಾದ ಸಂಸ್ಥೆಗಳನ್ನು ಪ್ರಾರಂಭಿಸಿ ಶಿಕ್ಷಣದ ಅನೇಕ ಮುಖಗಳನ್ನು ಪರಿಚಯಿಸಿದರು.

ಕಾಲೇಜಿನಲ್ಲಿ ಅವರು ಪ್ರಾರಂಭಿಸಿದ ಇನ್ನೆರೆಡು ಪ್ರಯೋಗಗಳು ಉಲ್ಲೇಖನೀಯ. ಅಧ್ಯಾಪಕರು ಕಾಲೇಜಿಗೆ ಬಂದು ಹಾಜರಿ ಪುಸ್ತಕದಲ್ಲಿ ರುಜುಮಾಡುವುದು ಸಾಮಾನ್ಯ. ಹೆಚ್‌ಎನ್ ಅಧ್ಯಾಪಕರ ಮೇಲೆ ನಂಬಿಕೆ ಇರಬೇಕು. ಅವರು ಸ್ವಯಂ ಶಿಸ್ತು ಪಾಲಿಸಬೇಕು ಎಂದು ತಮ್ಮ ಕಾಲೇಜಿನಲ್ಲಿ ಈ ಪದ್ಧತಿಯನ್ನು ತೆಗೆದು ಹಾಕಿದರು. ಹಾಗೆಯೇ ವಿದ್ಯಾರ್ಥಿಗಳಲ್ಲಿ ಅನುಶಾಸನ, ನೈತಿಕತೆಯನ್ನು ಬೆಳೆಸಲು ಪರೀಕ್ಷಾ ಕೊಠಡಿಯಲ್ಲಿ ಅಧ್ಯಾಪಕರಿಲ್ಲದ "Exam without invigilator" ಎಂಬ ನೂತನ ಪ್ರಯೋಗ ಮಾಡಿದ್ದೂ ಅವರ ಕಲ್ಪನೆಯೇ.

ನ್ಯಾಷನಲ್ ಕಾಲೇಜಿನಲ್ಲಿ 1960ರವರೆಗೆ ಹೆಣ್ಣು ಮಕ್ಕಳಿಗೆ ಓದಲು ಅವಕಾಶವಿರಲಿಲ್ಲ. ಹೆಚ್.ಎನ್ ಆಡಳಿತ ಮಂಡಳಿಯಲ್ಲಿ ಈ ವಿಷಯ ಕುರಿತು ಪ್ರಸ್ತಾಪ ಮಾಡಿ "ಸಮಾಜದ ಶೇಕಡಾ 50ರಷ್ಟಿರುವ

ಪುಟ 8 ಕ್ಕೆ ➤

# ಸಂಭ್ರಮದ ಗಣರಾಜ್ಯೋತ್ಸವ

**ವಿದ್ವಾನ್ ಡಾ॥ ವೆಂಕಟರಮಣ ದೇವರು ಭಟ್ಟ**
**ಪ್ರಧಾನಕಾರ್ಯದರ್ಶಿ, ಕ.ರಾ.ಮಾ.ಶಿ.ಸಂಘ**
**ಬೆಂಗಳೂರು ದಕ್ಷಿಣ ಜಿಲ್ಲೆ**



**ಹಿಮಾಲಯಂ ಸಮಾರಭ್ಯ ಯಾವದಿಂದು ಸರೋವರಮ್।**
**ತಂ ದೇವನಿರ್ಮಿತಂ ದೇಶಂ ಹಿಂದುಸ್ಥಾನಂ ಪ್ರಚಕ್ಷತೇ॥**

ಹಿಮಾಲಯದಿಂದ ಮೊದಲ್ಗೊಂಡು ಹಿಂದೂಮಹಾಸಾಗರದ ವರೆಗೆ ವ್ಯಾಪಿಸಲ್ಪಟ್ಟ, ದೇವ ನಿರ್ಮಿತವಾದ ದೇಶ ಹಿಂದುಸ್ಥಾನ. ಅಖಂಡವಾಗಿದ್ದ ಭರತಖಂಡ ಕಾಲಕ್ರಮದಲ್ಲಿ ಪರಕೀಯರ ಆಕ್ರಮಣದಿಂದ ನಲುಗಿಹೋಗಿ ಖಂಡ–ಖಂಡವಾಯಿತು. ನಮ್ಮ ದೇಶ ಲಕ್ಷಾಂತರ ದೇಶಭಕ್ತರ ಪ್ರಾಣತ್ಯಾಗದಿಂದ 1947 ಆಗಸ್ಟ್ 15ರಂದು ಸ್ವತಂತ್ರವಾಯಿತು. ಸ್ವಾತಂತ್ರ್ಯೋತ್ತರದಲ್ಲಿ ತುಂಡು–ತುಂಡಾಗಿ ಹಂಚಿ ಹರಿದು ಹೋಗಿದ್ದ ದೇಶವನ್ನು ಒಂದು ಮಾಡುವ ಜವಾಬ್ದಾರಿ ಆಗಿನ ಗೃಹಮಂತ್ರಿಗಳಾದ ಸರ್ದಾರ್ ವಲ್ಲಭ ಬಾಯಿ ಪಟೇಲ್‌ರವರ ಹೆಗಲಮೇಲೆ ಬಿತ್ತು. ಉಕ್ಕಿನ ಮನುಷ್ಯ ಪಟೇಲ್‌ರವರ ದೃಢಸಂಕಲ್ಪದಿಂದ ಎಲ್ಲ ರಾಜ್ಯಗಳೂ ಭಾರತದ ಒಕ್ಕೂಟವನ್ನು ಸೇರಿ ಭಾರತವು ಗಣರಾಜ್ಯವಾದದ್ದು ರೋಚಕ ಇತಿಹಾಸ.

ಗಣರಾಜ್ಯವೆಂದರೆ ಒಂದು ಸಂವಿಧಾನ ಅಥವಾ ಸರ್ಕಾರಕ್ಕೆ ಒಳಪಟ್ಟಿರುವಂತದ್ದು. ಒಂದು ರಾಷ್ಟ್ರದ ಮೂಲಭೂತ ಕಾನೂನು ಸಂವಿಧಾನ. ನಮ್ಮ ದೇಶದ ಸಂವಿಧಾನ ಜಾರಿಗೆ ಬಂದ ದಿನವನ್ನು ಗಣರಾಜ್ಯ ದಿನವನ್ನಾಗಿ ಆಚರಿಸಲಾಗುತ್ತದೆ. ನಮ್ಮ ದೇಶದ ಸಂವಿಧಾನವು 1949 ನವೆಂಬರ್ 26ರಂದು ಸಂಸತ್‌ನಲ್ಲಿ ಅಂಗೀಕರಿಸಲ್ಪಟ್ಟು, 1950 ಜನವರಿ 26ರಂದು ಸಂವಿಧಾನವನ್ನು ಜಾರಿಗೆ ತರಲಾಯಿತು. 1930ರ ಜನವರಿ 26ರಂದು ಲಾಹೋರ್ ಅಧಿವೇಶನದಲ್ಲಿ ಭಾರತ ಸಂಪೂರ್ಣ ಸ್ವರಾಜ್ಯ ಅಂಗೀಕರಿಸಿದ್ದರ ನೆನಪಿಗಾಗಿ ನೂತನ ಸಂವಿಧಾನವನ್ನು ಜನವರಿ 26ರಂದು ಜಾರಿಗೆ ತರಲಾಯಿತು. ಆದ್ದರಿಂದ ಈ ಐತಿಹಾಸಿಕ ಶುಭ ದಿನವನ್ನು ಗಣರಾಜ್ಯೋತ್ಸವವೆಂದು ದೇಶದುದ್ದಗಲಕ್ಕೂ ಭಾರತೀಯರು ಸಂಭ್ರಮದಿಂದ ಆಚರಿಸಿ ಸಂಭ್ರಮಿಸುತ್ತಾರೆ.

### ಭಾರತ ಸಂವಿಧಾನ ರಚನಾ ಸಮಿತಿಯ ಪರಿ

1939ರಲ್ಲಿ ಮೋತಿಲಾಲ್ ನೆಹರೂ ಸಮಿತಿಯ ಶಿಫಾರಸ್ಸು, ಕರಾಚಿ ಅಧಿವೇಶನದ ನಿಯಮಗಳು ಪ್ರೇರಕ. 1946ರಲ್ಲಿ ಭಾರತೀಯರಿಂದ ಕೂಡಿದ ಸಂವಿಧಾನ ರಚನಾಸಮಿತಿಯ ಸಭೆಯನ್ನು ರಚಿಸಲಾಯಿತು. ಈ ಸಭೆಯು 389 ಸದಸ್ಯರನ್ನು ಒಳಗೊಂಡಿತ್ತು. ದೇಶ ಇಬ್ಭಾಗವಾದಾಗ 299 ಸದಸ್ಯರನ್ನು ಒಳಗೊಂಡಿತು. ಇದರಲ್ಲಿ ಮೈಸೂರು ಸಂಸ್ಥಾನದಿಂದ 7 ಸದಸ್ಯರಿದ್ದರು. ಸಂವಿಧಾನ ರಚನಾ ಸಭೆಯ ಮೊದಲ ಅಧಿವೇಶನ 1946 ಡಿಸೆಂಬರ್ 9ರಂದು ನಡೆಯಿತು. ಶ್ರೀಸಚ್ಚಿದಾನಂದ ಸಿನ್ಹಾ ಹಂಗಾಮಿ ಅಧ್ಯಕ್ಷರಾಗಿದ್ದರು. 1946 ಡಿಸೆಂಬರ್ 11ರಂದು ಅಂದಿನ ರಾಷ್ಟ್ರಪತಿಗಳಾಗಿದ್ದ ಡಾ॥ ಬಾಬು ರಾಜೇಂದ್ರಪ್ರಸಾದ್‌ರವರನ್ನು ಖಾಯಂ ಅಧ್ಯಕ್ಷರನ್ನಾಗಿಯೂ, ಶ್ರೀ ಟಿ ಟಿ ಕೃಷ್ಣಮಾಚಾರಿರವರನ್ನು ಉಪಾಧ್ಯಕ್ಷರನ್ನಾಗಿ ಆಯ್ಕೆ ಮಾಡಲಾಯಿತು.

### ಸಂವಿಧಾನ ರಚನಾ ಸಮಿತಿಯ ಸದಸ್ಯರು

ಜವಾಹರಲಾಲ್ ನೆಹರು, ಸರ್ದಾರ್ ವಲ್ಲಭ ಬಾಯಿ ಪಟೇಲ್, ಡಾ॥ ಬಿ ಆರ್ ಅಂಬೇಡ್ಕರ್, ಮೌಲಾನ ಅಬ್ದುಲ್ ಕಲಾಂ, ಸಿ ರಾಜಗೋಪಾಲಾಚಾರಿ, ಶ್ರೀಮತಿ ಸರೋಜಿನಿ ನಾಯ್ಡು, ಎಸ್ ನಿಜಲಿಂಗಪ್ಪ, ಕೆ ಸಿ ರೆಡ್ಡಿ, ಕೆಂಗಲ್ ಹನುಮಂತಯ್ಯ ಮುಂತಾದವರು. ಸಂವಿಧಾನ ರಚನಾ ಸಭೆಯು ರಾಷ್ಟ್ರಕ್ಕೆ ಸಂಬಂಧಿಸಿದ ವಿಷಯ ಪರಿಶೀಲಿಸಲು 22 ಸಮಿತಿಗಳನ್ನು, 5 ಉಪಸಮಿತಿಗಳನ್ನು ಹೊಂದಿತ್ತು. ಕರಡು ಸಮಿತಿಯ ಅಧ್ಯಕ್ಷರು ಡಾ॥ ಬಿ ಆರ್ ಅಂಬೇಡ್ಕರ್‌ರವರು. ಕರಡು ಸಮಿತಿಯ ಸದಸ್ಯರು ಎನ್ ಗೋಪಾಲ ಸ್ವಾಮಿ ಅಯ್ಯಂಗಾರ್, ಕೆ ಎಮ್ ಮುನ್ಷಿ ಮುಂತಾದವರು.

### ಭಾರತ ಸಂವಿಧಾನದ ವಿಶೇಷತೆ

ಪ್ರಪಂಚದಲ್ಲಿರುವ ಲಿಖಿತ ಸಂವಿಧಾನಗಳಲ್ಲಿ ಭಾರತದ ಸಂವಿಧಾನವು ಅತಿ ದೊಡ್ಡ ಸಂವಿಧಾನ. ನಮ್ಮ ಸಂವಿಧಾನವು 25 ಭಾಗಗಳು, 12 ಅನುಸೂಚಿಗಳು, 465 ವಿಧಿಗಳನ್ನು ಒಳಗೊಂಡ ಬೃಹತ್ ಸಂವಿಧಾನ. ಈ ಸಂವಿಧಾನವು ಮೂಲಭೂತ ಹಕ್ಕುಗಳು, ಮೂಲಭೂತ ಕರ್ತವ್ಯಗಳು, ರಾಜ್ಯನೀತಿ ನಿರ್ದೇಶಕ ತತ್ವಗಳನ್ನು ಒಳಗೊಂಡಿದೆ. ಸಂವಿಧಾನ ರಚಿಸಲು 2 ವರ್ಷ 11 ತಿಂಗಳು 18 ದಿನಗಳು ಬೇಕಾಯಿತು.

●




**ಬಹುರತ್ನಾ ವಸುಂಧರಾ**

# ಅಂಬಾಬಾಯಿ– ಕನ್ನಡದ ಮೊಟ್ಟಮೊದಲ ಮಹಾಕಾವ್ಯ ಬರೆದ ಕನ್ನಡತಿ

**ನಂ. ನಾಗಲಕ್ಷ್ಮಿ**
ನಿವೃತ್ತ ಕನ್ನಡ ಉಪನ್ಯಾಸಕರು,
ಸರ್ಕಾರಿ ಪ.ಪೂ. ಕಾಲೇಜು,
ಬೆಂಗಳೂರು



ರಾಮಾಯಣ, ಮಹಾಭಾರತ ಕಾವ್ಯಗಳು ನಮ್ಮ ದೇಶದ ಸಂಸ್ಕೃತಿಯ ಮೂಲಬೇರುಗಳಾಗಿದ್ದು, ಜೀವನದ ಸಾರ್ವಕಾಲಿಕ ಮೌಲ್ಯಗಳನ್ನು ಸಾರುತ್ತಿರುವ ಜ್ಞಾನದ ಭಂಡಾರವೇ ಎನಿಸಿಕೊಂಡಿವೆ. ಸಾವಿರಾರು ವರ್ಷಗಳಿಂದಲೂ ತಮ್ಮ ವೈಶಿಷ್ಟ್ಯಗಳನ್ನು ಉಳಿಸಿಕೊಂಡು ಎಲ್ಲ ಕಾಲಕ್ಕೂ ಜನಜೀವನದ ಮೇಲೆ ಪ್ರಭಾವ ಬೀರುತ್ತಲೇ ಬಂದಿವೆ. ದೇಶದ ಹಲವಾರು ದೇಶೀಭಾಷೆಗಳಲ್ಲಿ ಮತ್ತೆಮತ್ತೆ ಬೇರೆಬೇರೆ ಕಾಲಗಳಲ್ಲಿಯೂ ರಚನೆಯಾಗುತ್ತಿದ್ದು, ಇಂದಿಗೂ ತಮ್ಮ ಮೌಲ್ಯವನ್ನು ಹಾಗೆಯೇ ಉಳಿಸಿಕೊಂಡಿವೆ. ನಗರ, ಗ್ರಾಮೀಣ ಪ್ರದೇಶದ ಜನರೆಂಬ ಭೇದವಿಲ್ಲದೆ ತಮ್ಮ ಬದುಕಿನಲ್ಲಿ ಇಂದಿಗೂ ಇವುಗಳ ಪ್ರಭಾವಕ್ಕೆ ಒಳಗಾಗಿರುವುದೇ ಇವುಗಳ ವೈಶಿಷ್ಟ್ಯವನ್ನು ಸಾರುತ್ತಿವೆ. ಅದರಿಂದಲೇ ಶಿಷ್ಟ ಮತ್ತು ಜಾನಪದ ಸಾಹಿತ್ಯಗಳೆಲ್ಲದರಲ್ಲಿಯೂ ಬೇರೆಬೇರೆ ಪ್ರಕಾರಗಳಲ್ಲಿ ಮತ್ತೆಮತ್ತೆ ಇವುಗಳು ಪುನರ್ನಿರ್ಮಾಣಗೊಳ್ಳುತ್ತಲೇ ಬಂದಿವೆ. ಇಪ್ಪತ್ತನೇ ಶತಮಾನದಲ್ಲಿ ಕೂಡ ಮಹಾಕವಿ ಕುವೆಂಪು ರಚಿಸಿದ 'ಶ್ರೀ ರಾಮಾಯಣದರ್ಶನಂ' ಮಹಾಕಾವ್ಯವು ಕನ್ನಡದ ಮೊದಲ ಜ್ಞಾನಪೀಠದ ಪುರಸ್ಕಾರವನ್ನು ಗಳಿಸಿದ್ದಂತೂ ಎಲ್ಲರಿಗೂ ತಿಳಿದದ್ದೇ ಆಗಿದೆ. ಆದಿಕವಿ ಮಹರ್ಷಿ ವಾಲ್ಮೀಕಿಯಿಂದ ರಚನೆಯಾಗಿರುವ ರಾಮಾಯಣವು ಹಲವು ಆದರ್ಶ ವ್ಯಕ್ತಿಗಳನ್ನು ಒಳಗೊಂಡಿದ್ದು ಅಲ್ಲಿ ಬರುವ ಪಿತೃವಾಕ್ಯ ಪರಿಪಾಲನೆ, ಭ್ರಾತೃಪ್ರೇಮ ಪಾತಿವ್ರತ್ಯ, ಸ್ವಾಮಿಭಕ್ತಿ, ಪರಿಶುದ್ಧ ಸ್ನೇಹ ಮುಂತಾದ ಚಿರಂತನ ಮೌಲ್ಯಗಳನ್ನು ಅಕ್ಷರಜ್ಞಾನವಿಲ್ಲದವರೂ ಸಹ ಮೌಖಿಕವಾಗಿ ಕಥೆಯನ್ನು ಕೇಳಿ ಈ ಮಹಾಕಾವ್ಯದ ಸತ್ವವನ್ನು ಅರಿತಿದ್ದಾರೆ.

ಇಂತಹ ರಾಮಾಯಣದ ಕಥೆಯನ್ನು ಕುವೆಂಪು ಅವರಿಗೂ ಮೊದಲು ಕರ್ನಾಟಕದಲ್ಲಿ ಸ್ವಾತಂತ್ರ್ಯಪೂರ್ವದಲ್ಲಿಯೇ 'ಶ್ರೀರಾಮಕಥಾಮೃತ ಕಾವ್ಯ' ಎಂಬ ಮಹಾಕಾವ್ಯವಾಗಿ ರಚಿಸಿದ ಮೊದಲ ಮಹಿಳೆ ಅಂಬಾಬಾಯಿಯವರ ಹೆಸರು ಎಷ್ಟು ಜನರಿಗೆ ಗೊತ್ತು? 1934–35 ರ ಅವಧಿಯಲ್ಲಿ ಈ ಮಹಾಕಾವ್ಯವನ್ನು ಕುಸುಮ ಷಟ್ಪದಿಯಲ್ಲಿ ಬರೆದು ಅಂಬಾಬಾಯಿ ಕರ್ನಾಟಕದಲ್ಲಿ ಮೊಟ್ಟಮೊದಲು ಮಹಾಕಾವ್ಯ ಬರೆದ ಮಹಿಳೆಯೆನಿಸಿದ್ದಾರೆ. ಆದರೆ ಅವರು ರಚಿಸಿದ 85 ವರ್ಷಗಳ ನಂತರ 2020 ರಲ್ಲಿ ಅದು ಪ್ರಕಟಣೆಯ ಅವಕಾಶವನ್ನು ಪಡೆದುಕೊಂಡಿತೆಂಬುದು ಮಾತ್ರ ಬೇಸರದ ಸಂಗತಿಯಾಗಿದೆ. ಏಕೆಂದರೆ 1945 ರಲ್ಲಿಯೇ ನಿಧನರಾದ ಅಂಬಾಬಾಯಿಯವರು ತಮ್ಮ ಪುಸ್ತಕದ ಪ್ರಕಟಣೆಯನ್ನು ನೋಡುವ ಭಾಗ್ಯವನ್ನು ಪಡೆಯಲಿಲ್ಲ. ಕೇವಲ ನಾಲ್ಕನೆಯ ತರಗತಿಯವರೆಗಷ್ಟೇ ಶಿಕ್ಷಣ ಪಡೆದಿದ್ದ ಅಂಬಾಬಾಯಿಯರ ಶಬ್ದಸಂಪತ್ತು, ಸರಳವಾದ ಆಡುಭಾಷೆಯ ಸೊಗಸು, ಬಳಸಿದ ಛಂದಸ್ಸಿನ ಮೇಲೆ ಅವರಿಗಿದ್ದ ಹಿಡಿತ ವಿಸ್ಮಯಗೊಳಿಸುತ್ತದೆ. ಇದು ಪಂಡಿತ ಪಾಮರರಾದಿಯಾಗಿ ಯಾರು ಬೇಕಾದರೂ ಓದಿ ಅರ್ಥಮಾಡಿಕೊಂಡು ಆಸ್ವಾದಿಸಬಹುದಾದ ಕಾವ್ಯವಾಗಿದೆ. ಇದಲ್ಲದೆ ಅವರು ಇನ್ನೂ ಅನೇಕ ದೀರ್ಘಕೃತಿಗಳನ್ನು ರಚಿಸಿದ್ದಾರೆ. ಸಾಮಾನ್ಯವಾಗಿ ಆರು ಏಳು ನುಡಿಗಳ ಕೀರ್ತನೆಗಳನ್ನು ರಚಿಸುತ್ತಿದ್ದು, 'ಶ್ರೀಕೃಷ್ಣ ಬಾಲಲೀಲೆಜೋಗುಳ'ದಲ್ಲಿ 389 ನುಡಿಗಳನ್ನು ಬರೆದಿದ್ದಾರೆ. ರಾಮಾಯಣದ ಬಗ್ಗೆ ಅವರಿಗಿದ್ದ ಭಕ್ತಿ, ಶ್ರದ್ಧೆಯ ಕಾರಣವಾಗಿ ತಾವು ಬರೆದಿದ್ದ ರಾಮಾಯಣ ಕಾವ್ಯವನ್ನು ಬರೆದು ಪ್ರತಿಮಾಡುವಂತೆ ಅಕ್ಷರಸ್ಥ ಹೆಣ್ಣುಮಕ್ಕಳಿಗೆ ಹೇಳಿ ಪ್ರೋತ್ಸಾಹಿಸುತ್ತಿದ್ದುದಲ್ಲದೆ ಸ್ವತಃ ತಾವೂ ಬರೆದು ಕೊಡುತ್ತಿದ್ದರಂತೆ. ಅನೇಕರ ಮನೆಗಳಿಗೆ ಹೋಗಿ ವಾರಗಟ್ಟಲೆ ರಾಮಾಯಣ ಪಾರಾಯಣ ಮಾಡಿ, ಪ್ರವಚನ ಮಾಡುತ್ತಿದ್ದರಂತೆ. ಅಂಬಾಬಾಯಿಯವರಿಂದ ಸುಂದರಕಾಂಡದ ಪ್ರವಚನ ಮಾಡಿಸಿದರೆ ಮನೆಗೆ ಶುಭವಾಗುತ್ತದೆ, ಕೈಗೊಂಡ ಕಾರ್ಯಗಳು ಫಲಪ್ರದವಾಗುತ್ತವೆಂಬ ನಂಬಿಕೆಯೊಂದಿಗೆ ಸಮಾಜದಲ್ಲಿ ಎಲ್ಲರ ಪ್ರೀತಿಪಾತ್ರರಾಗಿದ್ದರಂತೆ.

ಚಿತ್ರದುರ್ಗದ ಭೀಮಸೇನರಾಯರು ಮತ್ತು ಭಾರತೀಬಾಯಿಯವರ ಮಗಳಾಗಿ, ಮಾಧ್ವಕುಟುಂಬದಲ್ಲಿ, 1902 ರಲ್ಲಿ ಜನಿಸಿದವರು ಅಂಬಾಬಾಯಿ. ಹೆಣ್ಣುಮಕ್ಕಳ ವಿದ್ಯಾಭ್ಯಾಸಕ್ಕೆ ಪ್ರೋತ್ಸಾಹವಿರದಿದ್ದ ಆ ಕಾಲದಲ್ಲಿಯೂ ಮಗಳ ಬುದ್ಧಿವಂತಿಕೆಯನ್ನು ಗುರುತಿಸಿದ್ದ ತಂದೆ ಆಕೆಯನ್ನು ಪ್ರಾಥಮಿಕ ಶಾಲೆಗೆ ಸೇರಿಸಿ ನಾಲ್ಕನೆಯ ತರಗತಿಯವರೆಗೆ ಶಿಕ್ಷಣ ಪಡೆಯುವಂತೆ ಮಾಡಿದ್ದರು. ಆ ಕಾಲದ ಸಂಪ್ರದಾಯದಂತೆ ಹತ್ತು ವರ್ಷದ ಹುಡುಗಿಯನ್ನು ಶಾಲೆ ಬಿಡಿಸಿ ವಿವಾಹವನ್ನೂ ಮಾಡಲಾಯಿತು. ಹನ್ನೆರಡಕ್ಕೆ ಗಂಡನ ಮನೆ ಸೇರಿದ ಹುಡುಗಿಗೆ ಪ್ಲೇಗುಮಾರಿಯಿಂದ ಪತಿವಿಯೋಗವಾಗಿ ವೈಧವ್ಯ ಪ್ರಾಪ್ತವಾದುದಲ್ಲದೆ ಅದೇ ದಿನವೇ ತಂದೆಯನ್ನೂ ಕಳೆದುಕೊಂಡಿದ್ದರು. ಮಾನಸಿಕವಾಗಿ ಕುಗ್ಗಿಹೋದ ಅಂಬಾಬಾಯಿ ಪತಿಯ ಮನೆಯಿಂದ ಹೊರದೂಡಲ್ಪಟ್ಟು, ತಾಯಿಯ ಮನೆ ಸೇರುವಂತಾಗಿತ್ತು. ಆ ಕಾಲದ ಬಾಲವಿಧವೆಯರ ಹಾಗೇ ಹಿಡಿಕೂಳಿಗಾಗಿ ಬಂಧು, ಬಾಂಧವರ ಮನೆಗಳಿಗೆ ಸಹಾಯಕಳಾಗಿ ಹೋಗಿ ದುಡಿಯುತ್ತಾ ಅಲ್ಲಿನ ಹೆಣ್ಣುಮಕ್ಕಳ ಹೆರಿಗೆ, ಬಾಣಂತನ, ಆ ಮಕ್ಕಳ ಲಾಲನೆ, ಪಾಲನೆ ಮಾಡುತ್ತಿದ್ದರೂ ಅವರಲ್ಲಿದ್ದ ಸಮಾಧಾನ ಚಿತ್ತ, ಧಾರ್ಮಿಕ ಪ್ರವೃತ್ತಿ ಅವರ ಮನೋಬಲವನ್ನು ಹೆಚ್ಚಿಸಿತ್ತು. ತಮಗೆ ತಿಳಿದಂತೆ ಅಧ್ಯಯನ ಮಾಡುತ್ತ, ಬದುಕಿನ ಕಷ್ಟಗಳನ್ನು ಮರೆಯುವ ಅಭ್ಯಾಸವನ್ನು ಬೆಳೆಸಿಕೊಂಡರು. ಯೋಗಾಯೋಗವೆಂಬಂತೆ ಆ ಸಮಯದಲ್ಲಿ ದೇವರಾಯನದುರ್ಗದ ದಾಸಶ್ರೇಷ್ಠರಾದ ಮುದ್ದು ಮೋಹನದಾಸರು 1931 ರ ಚೈತ್ರ ಶುದ್ಧ ಶ್ರೀರಾಮನವಮಿಯಂದು ಅಂಬಾಬಾಯಿಯವರಿಗೆ ಅವರ 29 ನೇ ವಯಸ್ಸಿನಲ್ಲಿ 'ಗೋಪಾಲ ಕೃಷ್ಣ ವಿಠಲ' ಎಂಬ ಅಂಕಿತವನ್ನು ನೀಡಿದರು. ಅಂದಿನಿಂದ ತಮ್ಮನ್ನು ತಾವು ಸಂಪೂರ್ಣವಾಗಿ ಹರಿದಾಸರ ಮಾರ್ಗಕ್ಕೆ ಅರ್ಪಿಸಿಕೊಂಡ ಅಂಬಾಬಾಯಿಯವರು, ತಾಳ, ತಂಬೂರಿ ಹಿಡಿದು, ಕಾವಿ ಧರಿಸಿ, ಜೋಳಿಗೆ ಹಿಡಿದು, ಕಾಲಿಗೆ ಗೆಜ್ಜೆ ಕಟ್ಟಿ ಹೊಸ ಜೀವನದಲ್ಲಿ ನಡೆದರು. ಗುರುಗಳು ಉಪದೇಶಿಸಿದಂತೆ ದಾಸಪಂಥವನ್ನು ಪ್ರಚಾರ ಮಾಡುತ್ತ,

ಪುಟ 10 ಕ್ಕೆ ➤

**ನಿಮ್ಮ ಪಾಲಿಗೆ ಬಂದ ಕರ್ತವ್ಯವನ್ನು ಮಾಡಿ ನೀವು ಶುದ್ಧ ಚಾರಿತ್ರ್ಯವನ್ನು ರೂಢಿಸಿಕೊಳ್ಳಬೇಕು. – ಸ್ವಾಮಿ ವಿವೇಕಾನಂದ**

# ನಮಾಮಿ ಭಾರತ

■ ನಂ. ನಾಗಲಕ್ಷ್ಮಿ
ನಿವೃತ್ತ ಕನ್ನಡ ಉಪನ್ಯಾಸಕರು,
ಸರ್ಕಾರಿ ಪ.ಪೂ. ಕಾಲೇಜು, ಬೆಂಗಳೂರು

**ಗಂಗಾ ಸರಸ್ವತಿ ಸಿಂಧುರ್ಬ್ರಹ್ಮಪುತ್ರಶ್ಚ ಗಂಡಕಿ।**
**ಕಾವೇರಿ ಯಮುನಾ ರೇವಾ ಕೃಷ್ಣಾ ಗೋದಾ ಮಹಾನದಿ॥**

ಪ್ರಸ್ತುತ ಶ್ಲೋಕದಲ್ಲಿ ನಮ್ಮ ದೇಶದ ಪುಣ್ಯ ನದಿಗಳ ಹೆಸರುಗಳನ್ನು ತಿಳಿಯಬಹುದು.

'ಪ್ರಕೃತಿಯ ಆರಾಧನೆ ಪರಮ ಆರಾಧನೆ' ಎನ್ನುತ್ತದೆ ಕವಿವಾಣಿ. ಸನಾತನ ಹಿಂದೂ ಪದ್ಧತಿಯಲ್ಲಿ ಮನುಷ್ಯನು ತಾನು ಜನ್ಮ ಪಡೆಯಲು ಆಶ್ರಯ ಒದಗಿಸಿದ ಮತ್ತು ಬದುಕಲು ಅವಶ್ಯಕವಾಗಿರುವ ನೀರು ಆಹಾರ, ಗಾಳಿಯನ್ನು ಒದಗಿಸಿದ ಪ್ರಕೃತಿಯನ್ನು ಕುರಿತು ಸದಾಕಾಲ ಆದರ, ಗೌರವ ಮತ್ತು ಕೃತಜ್ಞತೆಗಳನ್ನು ಹೊಂದಿರಬೇಕೆಂದು ಸೂಚಿಸಲಾಗಿದೆ. ಸಾಮಾನ್ಯವಾಗಿ ಗಂಗೆ, ಯಮುನೆ, ಗೋದಾವರಿ, ಸರಸ್ವತಿ, ನರ್ಮದೆ, ಸಿಂಧು ಮತ್ತು ಕಾವೇರಿ ನದಿಗಳನ್ನು ಪುಣ್ಯ ನದಿಗಳೆಂದು ಪ್ರಾರ್ಥಿಸಿ 'ಪಾಪನಾಶಿನಿ' ಎಂದು ಪೂಜಿಸುವ ಸಂಪ್ರದಾಯವಿದೆ. ಈ ನದಿಗಳು ಹರಿಯುವ ಪ್ರದೇಶಗಳನ್ನು ಪುಣ್ಯಕ್ಷೇತ್ರಗಳೆಂದೂ, ತೀರ್ಥಯಾತ್ರಾ ಕ್ಷೇತ್ರಗಳೆಂದೂ ಭಾವಿಸಲಾಗಿದೆ. ಮೇಲಿನ ಶ್ಲೋಕದಲ್ಲಿ ಈ ಏಳು ನದಿಗಳಲ್ಲದೆ ಕೃಷ್ಣಾ, ಬ್ರಹ್ಮಪುತ್ರ, ಗಂಡಕಿ ಮತ್ತು ಮಹಾನದಿಗಳ ಹೆಸರುಗಳೂ ಇವೆ.

ಭಾರತ ದೇಶದಾದ್ಯಂತ ವಿವಿಧ ಭಾಗಗಳಲ್ಲಿ ಹರಿಯುವ ಈ ನದಿಗಳು ಪೌರಾಣಿಕ ಹಿನ್ನೆಲೆಯ ಕಥೆಗಳನ್ನು ಹೊಂದಿದ್ದು ಜನರಲ್ಲಿ ಧಾರ್ಮಿಕ ಭಾವನೆಗಳನ್ನು ಪ್ರೇರೇಪಿಸುತ್ತವೆ.

ಹಿಮಾಲಯದಿಂದ ಉದ್ಭವವಾಗುವ ಗಂಗಾನದಿಯನ್ನು ದೇವನದಿ ಎಂದೂ ಕರೆಯುತ್ತಾರೆ. ಹಿಂದುಗಳಿಗೆಲ್ಲ ಈ ನದಿಯೊಂದಿಗೆ ಭಾವನಾತ್ಮಕ ಸಂಬಂಧವಿದೆ. ವಾರಣಾಸಿಯಲ್ಲಿ ಮತ್ತು ಹರಿದ್ವಾರದಲ್ಲಿ ಈ ನದಿಗೆ 'ಗಂಗಾ ಆರತಿ' ಎಂಬ ವಿಶೇಷ ಪೂಜೆಯನ್ನು ಸಲ್ಲಿಸಲಾಗುತ್ತದೆ. ಹಿಮಾಲಯದಿಂದ ಅಲಕನಂದಾ, ಮಂದಾಕಿನಿ, ಭಾಗೀರಥಿ ಮತ್ತು ಧೌಲಿ ಗಂಗಾ ಮತ್ತು ಗಂಗಾ ಎಂಬ ಐದು ಧಾರೆಗಳಾಗಿ ತನ್ನ ಪಥವನ್ನು ಪ್ರಾರಂಭಿಸಿ ಹಲವು ತೀರ್ಥಕ್ಷೇತ್ರಗಳಲ್ಲಿ ಹರಿಯುತ್ತಾ ಕಡೆಗೆ ಬಂಗಾಳದಲ್ಲಿರುವ ಬಂಗಾಳದ ಕೊಲ್ಲಿಗೆ ಸೇರುತ್ತದೆ.

ಈ ಪವಿತ್ರ ನದಿಗಳಲ್ಲಿ ಒಂದಾದ ನರ್ಮದಾ ನದಿಗೆ 'ರೇವಾ' ಎಂಬ ಹೆಸರೂ ಇದೆ. ಇದು ಸಂಪೂರ್ಣವಾಗಿ ಭಾರತದಲ್ಲಿ ಹರಿಯುವ ನದಿಗಳ ಪೈಕಿ ನಾಲ್ಕನೆಯ ಅತಿ ಉದ್ದದ ನದಿಯಾಗಿದೆ. ಪೂರ್ವದಿಂದ ಪಶ್ಚಿಮಾಭಿಮುಖವಾಗಿ ಹರಿಯುವ ಕೇವಲ ಮೂರು ಪ್ರಮುಖ ನದಿಗಳ ಪೈಕಿ ಒಂದಾಗಿದೆ. ಇದರ ಉಗಮಸ್ಥಾನ ಮಧ್ಯಪ್ರದೇಶದ ಅನುಪ್ಪುರ್ ಜಿಲ್ಲೆಯ ಅಮರಕಂಟಕ್ ಎಂಬಲ್ಲಿರುವ ನರ್ಮದಾ ಕುಂಡ. ದ್ವಾದಶ ಜ್ಯೋತಿರ್ಲಿಂಗಗಳಲ್ಲಿ ಒಂದಾದ ಓಂಕಾರೇಶ್ವರ ಈ ನದಿಯ ದಡದಲ್ಲಿದೆ. ಇದನ್ನು 'ಮಾಂಧಾತಾ' ಅಥವಾ 'ಶಿವಪುರಿ' ಎಂದೂ ಕರೆಯುತ್ತಾರೆ. ಇದು ಓಂ ಆಕಾರದಲ್ಲಿರುವ ನರ್ಮದಾ ನದಿಯಲ್ಲಿ ರೂಪುಗೊಂಡಿರುವ ದ್ವೀಪವಾಗಿದೆ.

ಕಾವೇರಿಯನ್ನು 'ದಕ್ಷಿಣ ಗಂಗೆ' ಎಂದೇ ಕರೆಯುತ್ತಾರೆ. ಕೊಡಗಿನಲ್ಲಿರುವ ತಲಕಾವೇರಿ ಇದರ ಉಗಮಸ್ಥಾನವೆಂದು ಪರಿಗಣಿಸಲಾಗಿದೆ. ಸಮುದ್ರ ಮಟ್ಟದಿಂದ ಸುಮಾರು 1276 ಮೀಟರ್ ಎತ್ತರದಲ್ಲಿದ್ದು ಬ್ರಹ್ಮಗಿರಿ ಎಂಬ ಬೆಟ್ಟದಲ್ಲಿ ಈ ಉಗಮ ಸ್ಥಾನವನ್ನು ಕಾಣುತ್ತೇವೆ. ಇದನ್ನು 'ಕರ್ನಾಟಕದ ಜೀವನದಿ'ಯೆಂದೂ ಕರೆಯುತ್ತಾರೆ. ಇದು ಹರಿಯುವ ಒಂದು ಪವಿತ್ರ ಕ್ಷೇತ್ರ ತಿರುಮಕೂಡಲ ನರಸೀಪುರದಲ್ಲಿ ಕಾವೇರಿ, ಕಪಿಲ ಮತ್ತು ಸ್ಫಟಿಕ ಸರೋವರ ಸೇರಿ ಸಂಗಮ ಸ್ಥಳವಾಗಿದೆ. ಸ್ಫಟಿಕ ಸರೋವರ ಗುಪ್ತಗಾಮಿನಿಯಾಗಿದೆ.

ಉತ್ತರಾಖಂಡ ರಾಜ್ಯದ ಗಡ್ವಾಲ್ ವಿಭಾಗದ ಉತ್ತರಕಾಶಿ ಎಂಬ ಸ್ಥಾನದಿಂದ ಉತ್ತರಕ್ಕೆ ಸುಮಾರು 30 ಕಿ.ಮೀ ದೂರದಲ್ಲಿರುವ ಯಮುನೋತ್ರಿ ಎಂಬಲ್ಲಿಂದ ಈ ನದಿಯು ಉಗಮವಾಗುತ್ತದೆ. ಈ ಯಮುನೋತ್ರಿಯು ಚಾರ್‌ಧಾಮ್ ಯಾತ್ರೆಯ ಒಂದು ಪವಿತ್ರ ಸ್ಥಳವಾಗಿದ್ದು, ಇಲ್ಲಿ ಯಮುನಾ ದೇವಿಗೆ ಮುಡಿಪಾದ ದೇವಾಲಯವಿದೆ. ಬಿಸಿ ನೀರಿನ ಕುಂಡವೂ ಇಲ್ಲಿದೆ. ಈ ನದಿಯ ದೆಹಲಿ, ಹರಿಯಾಣದ ಮೂಲಕ ಹರಿದು ಕೊನೆಗೆ ಉತ್ತರ ಪ್ರದೇಶದ ಪ್ರಯಾಗದಲ್ಲಿ ಗಂಗೆಯೊಂದಿಗೆ ಸೇರಿ ತ್ರಿವೇಣೀ ಸಂಗಮವಾಗುತ್ತದೆ. ಇಲ್ಲಿಯೇ ಸರಸ್ವತಿ ನದಿಯೂ ಗುಪ್ತಗಾಮಿನಿಯಾಗಿ ಹರಿದು ಗಂಗೆ ಮತ್ತು ಯಮುನಾ ನದಿಯನ್ನು ಸೇರುತ್ತದೆ. ಶ್ರೀ ಕೃಷ್ಣನ ಜನ್ಮಸ್ಥಳವಾದ ಮಥುರಾ ಪಟ್ಟಣ ಈ ನದಿಯ ದಡದಲ್ಲಿಯೇ ಇದ್ದು ಅದನ್ನು 'ಬ್ರಿಜ್‌ಭೂಮಿ' ಎಂದೇ ಕರೆಯುತ್ತಾರೆ. ●

- **ನೀವು ಯಾವುದೇ ಕೆಲಸವನ್ನು ಮಾಡುವಾಗಲೂ ನಿಮ್ಮ ಮನಸ್ಸು ಹೃದಯ, ನಿಮ್ಮ ಸರ್ವಸ್ವವನ್ನೂ ಆ ಕೆಲಸಕ್ಕೆ ಕೊಡಿ.**
- **ಶಕ್ತಿಯೇ ಜೀವನ, ದುರ್ಬಲತೆಯೇ ಮರಣ; ಶಕ್ತಿಯೇ ಪರಮಾನಂದ, ಅಖಂಡಜೀವನ, ಅಮರತ್ವ. ದುರ್ಬಲತೆಯೇ ಅನವರತ ದುಃಖ, ತಳಮಳ, ದುರ್ಬಲತೆಯೇ ಮರಣ.**
- **ಶಿಕ್ಷಣವೆಂದರೆ ಮೊದಲೇ ಮನುಷ್ಯನಲ್ಲಿ ಇರುವ ಪರಿಪೂರ್ಣತೆಯನ್ನು ಪ್ರಕಾಶಪಡಿಸುವುದು.**

**– ಸ್ವಾಮಿ ವಿವೇಕಾನಂದ**

# ವೇದವಿಜ್ಞಾನ ಗುರುಕುಲಮ್ ಮತ್ತು ವೇದವಿಜ್ಞಾನಶೋಧಸಂಸ್ಥಾನ

# ಶುಭಕೃತ್ ಸಂವತ್ಸರದ ವರದಿ

"ಪ್ರಜಾನಾಂ ವಿನಯಾಧಾನಾತ್" ಎನ್ನುವ ಕವಿಕುಲಗುರು ಕಾಳಿದಾಸನು ಸಂಸ್ಕಾರವೇ ವಿದ್ಯೆಯ ಸಾರವೆಂದು ತಿಳಿಸಿದ್ದಾನೆ. ಸಮಾಜದ ವಿವಿಧ ಕ್ಷೇತ್ರಗಳಲ್ಲಿ ಶಿಕ್ಷಣಕ್ಷೇತ್ರವು ಪ್ರಮುಖ ಸ್ಥಾನವನ್ನು ಅಲಂಕರಿಸುತ್ತದೆ. ಎಲ್ಲರೂ ಶಿಕ್ಷಣಕ್ಕೆ ಆದ್ಯತೆಯನ್ನು ನೀಡುತ್ತಾರೆ. ಚೆನ್ನಾಗಿ ಓದಿ, ಒಳ್ಳೆಯ ಹುದ್ದೆಗಳನ್ನೇರಬೇಕು ಎಂದು ಆಶಿಸುತ್ತಾರೆ. ವಿದ್ಯಾವಂತರಾಗುವುದು ಉತ್ತಮ ವಿಚಾರವೇ ಆದರೂ, ಅದಕ್ಕಿಂತ ಮಿಗಿಲಾಗಿ ಸಂಸ್ಕಾರವಂತರಾಗುವುದು ಅತ್ಯುತ್ತಮ. ವ್ಯಕ್ತಿಗಳು ಸುಶಿಕ್ಷಿತರು, ಸುಸಂಸ್ಕೃತರು ಆಗುವುದಕ್ಕೆ ನಮ್ಮ ದೇಶದ ಪರಂಪರೆಯು ನಮಗೆ ದಾರಿತೋರಿಸಿದೆ. ಅದುವೇ ಗುರುಕುಲ ಶಿಕ್ಷಣಪರಂಪರೆ.

ಇದೇ ಧ್ಯೇಯೋದ್ದೇಶದಿಂದ 1997 ರಂದು ಅನೇಕರ ದಿವ್ಯ ಉಪಸ್ಥಿತಿಯಲ್ಲಿ "ವೇದವಿಜ್ಞಾನ ಗುರುಕುಲ"ವು ಪ್ರಾರಂಭಗೊಂಡಿತು. "ವಿದ್ವತ್ಸು ಸಾಮಾಜಿಕದೃಷ್ಟಿ" ಎಂಬುವುದು ಗುರುಕುಲದ ಮೂಲ ಮಂತ್ರ. ವೇದ, ವಿಜ್ಞಾನ, ಯೋಗ, ಕೃಷಿ ಮತ್ತು ಕಲಾ ಎಂಬ ಪಂಚಮುಖೀ ಶಿಕ್ಷಣವನ್ನು ಆಚಾರ್ಯರು ಛಾತ್ರರಿಗೆ ಧಾರೆಯರೆಯುತ್ತಾರೆ. ಆಚಾರ್ಯರ ವಿದ್ಯಾರ್ಥಿಗಳ ವಾಸವು ಜೊತೆಯಾಗಿ ಇರುತ್ತದೆ ಎನ್ನುವುದು ವಿಶೇಷ. ಗುರುಕುಲದ ವಿದ್ಯಾರ್ಥಿಯು ತನ್ನನ್ನು ತಾನು ಅರಳಿಸಿಕೊಳ್ಳುತ್ತಾ ಸಮಾಜಕ್ಕೆ ಸುಗಂಧವನ್ನು ನೀಡಬೇಕು ಎಂಬ ಆಶಯದ ಹಿನ್ನೆಲೆಯಲ್ಲಿ ಸಾಮಾಜಿಕ ಚಟುವಟಿಕೆಗಳನ್ನು ಹಮ್ಮಿಕೊಳ್ಳಲಾಗುತ್ತದೆ. ಸಮಾಜದೊಡನೆ ಸಂಪರ್ಕ, ಸಮಾಜದ ಸ್ಥಿತಿಗತಿಗಳ ಬಗ್ಗೆ ಅರಿವು, ತಾನು ಸಮಾಜದೊಂದಿಗೆ ಹೇಗೆ ಸ್ಪಂದಿಸಬೇಕು ಇತ್ಯಾದಿ ವಿಷಯಗಳನ್ನು ಅರಿತುಕೊಳ್ಳಲು ಪ್ರಯತ್ನಿಸುವ ಒಂದು ಪ್ರಕ್ರಿಯೆ. ಈ ನಿಟ್ಟಿನಲ್ಲಿ ಬಾಲಗೋಕುಲ, ಗ್ರಾಮಸಂಪರ್ಕ, ಭಜನೆ, ರಕ್ಷಾಬಂಧನಾದಿ ಕಾರ್ಯಕ್ರಮಗಳು, ಭಾರತಮಾತಾ ಪೂಜನ ಇತ್ಯಾದಿ ಚಟುವಟಿಕೆಗಳನ್ನು ವಿದ್ಯಾರ್ಥಿಗಳು ಗ್ರಾಮ ಗ್ರಾಮಗಳಲ್ಲಿ ನಡೆಸುತ್ತಾರೆ.

ಪ್ರಸ್ತುತ ಗುರುಕುಲದಲ್ಲಿ 13 ಜನ ಆಚಾರ್ಯರು, 70 ಜನ ಛಾತ್ರರು ಅಧ್ಯಾಪನ ಅಧ್ಯಯನದಲ್ಲಿ ತೊಡಗಿದ್ದಾರೆ.

### ಗುರುಕುಲದ ವಾರ್ಷಿಕ ವೃತ್ತಾಂತ

- ಡಿಸೆಂಬರ್ 26 ರಂದು ಜನಸೇವಾ ವಿಶ್ವಸ್ತ ಮಂಡಳಿಯ ಪೂರ್ಣಮಂಡಲೋತ್ಸವದ ನಡುವೆ ವೇದವಿಜ್ಞಾನ ಗುರುಕುಲದ ಅರ್ಧ ಮಂಡಲೋತ್ಸವದ ಆರಂಭವಾಯಿತು.
- ಮಾರ್ಚ್ 17 ಹಾಗೂ 18 – 2022 ರಂದು ಗುರುಕುಲದ ವಿದ್ಯಾರ್ಥಿಗಳು ರಾಜ್ಯಸ್ತರೀಯ ಸಂಸ್ಕೃತ ಸ್ಪರ್ಧೆಗಳಲ್ಲಿ ಭಾಗವಹಿಸಿ 12 ಪ್ರಥಮ ಸ್ಥಾನಗಳನ್ನು ಪಡೆದುಕೊಂಡರು. ಈ ಸಾಧನೆಯೊಂದಿಗೆ ಕರ್ನಾಟಕ ರಾಜ್ಯಸ್ತರದಲ್ಲಿ ಅನೇಕ ಸಂಸ್ಕೃತ ಅಧ್ಯಯನ ಕೇಂದ್ರಗಳ ಪ್ರಾತಿನಿಧ್ಯ ಇರುವ ಈ ಸ್ಪರ್ಧೆಗಳಲ್ಲಿ ಗುರುಕುಲದ ವಿದ್ಯಾರ್ಥಿಗಳು "ವಿಜಯವೈಜಯಂತೀ" (ಪ್ರಥಮ ಸ್ಥಾನ) ಪುರಸ್ಕಾರವನ್ನು ಪಡೆದಿರುವುದು ಉಲ್ಲೇಖನೀಯ.
- ಮಾರ್ಚ್ 27 – 2022 ರಿಂದ ನಾಲ್ಕು ದಿನಗಳ ಕಾಲ ಗುರುಕುಲದ ವಿದ್ಯಾರ್ಥಿಗಳು ರಾಷ್ಟ್ರಸ್ತರೀಯ ಸಂಸ್ಕೃತ ಸ್ಪರ್ಧೆಗಳಲ್ಲಿ ಭಾಗವಹಿಸಿ 3 ಸುವರ್ಣ ಪದಕಗಳನ್ನು ಪಡೆದುಕೊಂಡರು.
- ಏಪ್ರಿಲ್ 2 ರಂದು ಯುಗಾದಿ ಉತ್ಸವವನ್ನು ಆಚರಿಸಲಾಯಿತು. ಹಾಗೂ ಏಪ್ರಿಲ್ 3 ರಂದು ಸಾರಸ್ವತ ಗ್ರಂಥಾಧ್ಯಯನ ಮಾಲೆಯ ಅಂಗವಾಗಿ ಎರಡು ತಿಂಗಳುಗಳ ಅವಧಿಯ ಮಾನಮೇಯೋದಯಠಟಿಟುಟಿಜ ಕಾರ್ಯಶಾಲೆಯನ್ನು ಆರಂಭಿಸಲಾಯಿತು. ಈ ಕಾರ್ಯಶಾಲೆಯಲ್ಲಿ ವಿದ್ವಾನ್. ಸುಬ್ರಾಯ ಭಟ್ಟ ವಿದ್ವಾನ್‌ಮಣಿದ್ರವಿಡ ಶಾಸ್ತ್ರಿಗಳು ಚೆನ್ನೈ, ವಿದ್ವಾನ್ ಕೆ. ಎಸ್. ಮಹೇಶ್ವರನ್, ವಿದ್ವಾನ್ ರಾಜೇಶ್ವರ ದೇಶಮುಖ ವಿದ್ವಾನ್ ವಿಜಯ ಶರ್ಮಾ, ವಿದ್ವಾನ್ ಕಾರ್ತಿಕ ಶರ್ಮಾ, ವಿದ್ವಾನ್ ಪುಷ್ಕರ ದೇವಪೂಜಾರಿ ಹೀಗೆ ಬಹಳಷ್ಟು ವಿದ್ವಾಂಸರು ಪಾಠವನ್ನು ಮಾಡಿದರು.
- ಏಪ್ರಿಲ್ 10 ರಂದು ರಾಮಾಯಣದ ಪಾರಾಯಣದ ಜೊತೆಗೆ ವಿಶೇಷವಾಗಿ ರಾಮನವಮಿಯನ್ನು ಆಚರಿಸಲಾಯಿತು. ಅಂದು ರಾಮಾಯಣದ ಬಗ್ಗೆ ವಿದ್ವಾನ್. ಉಮಾಕಾಂತ ಭಟ್ಟರ ವಿಶೇಷ ಉಪನ್ಯಾಸವನ್ನು ಆಯೋಜಿಸಲಾಗಿತ್ತು.
- ಏಪ್ರಿಲ್ 14 ರಂದು ಅಂತಿಮ ವರ್ಷದ ವಿದ್ಯಾರ್ಥಿಗಳಿಗೆ ದೀಕ್ಷಾಂತ ಕಾರ್ಯಕ್ರಮವನ್ನು ಆಯೋಜಿಸಲಾಯಿತ್ತು. ಉತ್ತರಾದಿ ಮಠದ ಪ್ರಾಚಾರ್ಯರಾದ ಶ್ರೀ ಸತ್ಯಧ್ಯಾನ ಕಟ್ಟಿ ಆಚಾರ್ಯರ ಉಪಸ್ಥಿತಿ ಇತ್ತು. ಅವರು ತಮ್ಮ ಭಾಷಣದ ಮೂಲಕ ದೀಕ್ಷಾಂತವನ್ನು ಸ್ವೀಕರಿಸುತ್ತಿರುವ ವಿದ್ಯಾರ್ಥಿಗಳಿಗೆ ಮುಂದಿನ ಜೀವನದ ನಿಲುವಿನ ಕುರಿತಾದ ಮಾರ್ಗದರ್ಶನವನ್ನು ನೀಡಿದರು.
- ಏಪ್ರಿಲ್ 25 ರಿಂದ 29 ರವರೆಗೆ ವಾರ್ಷಿಕ ಆಚಾರ್ಯ ಪ್ರಶಿಕ್ಷಣವು ಗುರುಕುಲಕ್ಕೆ ನಿಕಟವಿರುವ ಋತಂಬರಾ ಎಂಬಾ ಸ್ಥಾನದಲ್ಲಿ ನಡೆಯಿತು. ಪ್ರಶಿಕ್ಷಣದಲ್ಲಿ ಮೂರೂ ಗುರುಕುಲಗಳ ಆಚಾರ್ಯರು, ಮಾತೃಶ್ರೀಗಳು ಮತ್ತು ಪ್ರಬಂಧಕವರ್ಗದವರು ಉಪಸ್ಥಿತರಿದ್ದು ಅನೇಕ ವಿಷಯ ಮತ್ತು ವಿಚಾರಗಳ ಬಗ್ಗೆ ಚರ್ಚೆ ಮತ್ತು ಸಂವಾದವನ್ನು ನಡೆಸಿದರು. ಪ್ರಶಿಕ್ಷಣದಲ್ಲಿ ವಿದ್ವಾಂಸರು ಮತ್ತು ಸಂಘದ ಹಿರಿಯರು ಮಾರ್ಗದರ್ಶನ ಮಾಡುವುದರ ಮುಖಾಂತರ ಎಲ್ಲರಿಗೂ ಕೂಡ ಪ್ರೇರಣೆ ನೀಡಿದರು.
- ಮೇ 3 ರಂದು ಭಾಮತೀ ಕಾರ್ಯಶಾಲೆಯ ಸಮಾರೋಪವನ್ನು ಮಾಡಲಾಯಿತು. ಅಂದಿನ ಕಾರ್ಯಕ್ರಮದಲ್ಲಿ ಕವಿಕುಲಗುರು ಕಾಳಿದಾಸ ವಿಶ್ವವಿದ್ಯಾಲಯದ ಕುಲಪತಿಗಳಾದ ಪ್ರೊ॥ ಮಧುಸೂದನ ಪೆನ್ನಾ ಹಾಗೂ ಪ್ರೊ॥ ರಾಮಚಂದ್ರ ಭಟ್ ಅವರು ಉಪಸ್ಥಿತರಿದ್ದರು.
- ಜೂನ್ 10 ರಂದು ನೂತನ ಛಾತ್ರರ ಪ್ರವೇಶೋತ್ಸವವಾಯಿತು. ಹಾಗೂ ಜೂನ್ 16 ರಂದು 'ಧೀದೀಕ್ಷಾ' ಕಾರ್ಯಕ್ರಮ ನೆರವೇರಿತು. 15 ವಿದ್ಯಾರ್ಥಿಗಳು ಅಂದು ದೀಕ್ಷೆಯನ್ನು ಪಡೆದರು.
- 21-06-2022 ರಂದು ಯೋಗದಿನಾಚರಣೆಯನ್ನು

ಪುಟ 8 ಕ್ಕೆ ➢

ಎಲ್ಲಾ ಶಕ್ತಿಯೂ ನಿನ್ನಲ್ಲಿದೆ; ನೀನು ಎಲ್ಲವನ್ನೂ, ಏನನ್ನಾದರೂ ಮಾಡಬಹುದು. – ಸ್ವಾಮಿ ವಿವೇಕಾನಂದ

➢ ಪುಟ 7 ರಿಂದ.....

ಮಾಡಲಾಯಿತು. ಇದರ ಅಂಗವಾಗಿ ಸಮೀಪದ ಹಳ್ಳಿಗಳಿಗೆ ತೆರಳಿ ಮಕ್ಕಳು ಒಂದು ವಾರದ ಕಾಲ ಯೋಗಾಸನವನ್ನು ಮಾಡಿಸಿದರು. ಜೂನ್ 21ರಂದು ಯೋಗಾಭ್ಯಾಸದಲ್ಲಿ ಭಾಗವಹಿಸಿದ ಎಲ್ಲ ಶಿಬಿರಾರ್ಥಿಗಳ ಜೊತೆ ಜನಸೇವಾ ಅಂಗಣದಲ್ಲಿ ಸಾಮೂಹಿಕ ಯೋಗದಿನಾಚರಣೆಯನ್ನು ನಡೆಸಿದರು.

- ಜೂನ್ 24 ರಂದು ಶೃಂಗೇರಿಯ ಮಹಾಸನ್ನಿಧಾನಂಗಳಾದ ಶ್ರೀ ಶ್ರೀ ವಿಧುಶೇಖರ ಭಾರತೀ ಸ್ವಾಮಿಗಳು ಗುರುಕುಲಕ್ಕೆ ಆಗಮಿಸಿ ಆಶೀರ್ವಾದವನ್ನು ಮಾಡಿದರು.
- ಜೂನ್ 27 ರಂದು ಸ್ವರ್ಣವಲ್ಲೀ ಮಠದ ಶ್ರೀಮದ್ಗಂಗಾಧರೇಂದ್ರ ಸರಸ್ವತೀ ಸ್ವಾಮಿಗಳು ಗುರುಕುಲಕ್ಕೆ ಆಗಮಿಸಿ ಆಶೀರ್ವಾದವನ್ನು ಮಾಡಿದರು. ಹಾಗೂ ಅಂದೇ ಜನಸೇವಾ ವಿದ್ಯಾಕೇಂದ್ರದ ಅಧಿಶೀಲ ಶಿಕ್ಷಣದ ಶುಭಾರಂಭವನ್ನು ಅವರ ದಿವ್ಯ ಸಾನ್ನಿಧ್ಯದಲ್ಲಿ ಮಾಡಲಾಯಿತು.
- ಆಗಸ್ಟ್ 13 ರಿಂದ 15 ಅಮೃತ ಮಹೋತ್ಸವದ ಅಂಗವಾಗಿ ಹರ್ ಘರ್ ತಿರಂಗಾ ಅಭಿಯಾನದ ಉದ್ದೇಶದಿಂದ ಮೂರು ದಿನಗಳ ಕಾಲ ಗುರುಕುಲದಲ್ಲಿಯೂ ಭಾರತದ ರಾಷ್ಟ್ರಧ್ವಜವನ್ನು ಹಾರಿಸಲಾಯಿತು. ಆಗಸ್ಟ್ 15 ರಂದು ಸುಮಾರು 5 ಕಿಲೋಮೀಟರ್‌ನಷ್ಟು ತಿರಂಗಾ ಯಾತ್ರೆಯನ್ನು ಮಾಡುವುದರ ಜೊತೆಗೆ ಸ್ವಾತಂತ್ರ್ಯದ ಅಮೃತ ಮಹೋತ್ಸವವನ್ನು ಆಚರಿಸಲಾಯಿತು.
- ಅಕ್ಟೋಬರ್ 20 ರಂದು ವೇದವಿದ್ವಾಂಸರು ಗುರುಕುಲಕ್ಕೆ ಆಗಮಿಸಿ ವಿದ್ಯಾರ್ಥಿಗಳ ವೇದ ಪರೀಕ್ಷೆಯನ್ನು ಮಾಡಿದರು. ವಿದ್ಯಾರ್ಥಿಗಳು ಪರೀಕ್ಷೆಯಲ್ಲಿ ಸಶ್ರದ್ಧೆಯಿಂದ ಭಾಗಗ್ರಹಣ ಮಾಡಿ ವೇದದ ಕಂಠಪಾಠವನ್ನು ವಿದ್ವಾಂಸರಿಗೆ ಸಮರ್ಪಿಸಿದರು.
- ನವೆಂಬರ್ 4, 5 ಮತ್ತು 6 ರಂದು "ಗುರುಕುಲಶಿಕ್ಷಾ ವಿಶ್ವಸುದೀಕ್ಷಾ" ಎಂಬ ಧ್ಯೇಯ ಮಂತ್ರದೊಂದಿಗೆ ರಾಷ್ಟ್ರೀಯ ಗುರುಕುಲ ಸಂಗೋಷ್ಠಿಯನ್ನು ಆಯೋಜಿಸಲಾಗಿತ್ತು. ನಾನಾ ದೇಶಗಳಿಂದ, ಅನೇಕ ರಾಜ್ಯಗಳಿಂದ ಗುರುಕುಲಗಳ ಪ್ರತಿನಿಧಿಗಳು ಆಗಮಿಸಿ ಕಾರ್ಯಕ್ರಮವನ್ನು ಯಶಸ್ವಿಗೊಳಿಸಿದರು. ಇದಕ್ಕೆ ಅನೇಕ ಗಣ್ಯರು, ಸಂಘದ ಹಿರಿಯರು ಕೂಡ ಸಾಕ್ಷಿಯಾದರು.
- ಅಕ್ಟೋಬರ್ 4 ರಂದು ಆಚಾರ್ಯ ರಾಮಚಂದ್ರಭಟ್ಟರಿಗೆ ಗುಜರಾತ್ ಪೋರಬಂದರ್ ನಲ್ಲಿ ಇರುವ ಸಾಂದೀಪನಿ ಸಂಸ್ಥೆಯಿಂದ 'ಬ್ರಹ್ಮರ್ಷಿ ' ಪುರಸ್ಕಾರ ನೀಡಿ ಗೌರವಿಸಿದರು. ಈ ಸಂದರ್ಭದಲ್ಲಿ ಸಂಸ್ಥೆಯ ಅಧ್ಯಕ್ಷರು ಮಹಾತ್ಮರೂ ಆದ ಶ್ರೀ ರಮೇಶ ಭಾಯಿ ಓಝಾ, ಕೇಂದ್ರದ ಸಾಂಸ್ಕೃತಿಕ ಮಂತ್ರಿಗಳಾದ ಅರ್ಜುನ್ ನಾಗವಾರರವರು ಉಪಸ್ಥಿತರಿದ್ದರು.
- ಈ ವರ್ಷದಲ್ಲಿ ಗುರುಕುಲದ ಆಚಾರ್ಯರಾದಂತಹ ಶ್ರೀ ಸತ್ಯನಾರಾಯಣ ಎಂಬುವವರ ''ಅದ್ವೈತಸಿದ್ಧಿ ತಾರ್ಕಿಕಪ್ರಮೇಯವಿಮರ್ಶಃ" ಎಂಬ ಗ್ರಂಥಕ್ಕೆ ವಿದ್ಯಾವಾರಿಧಿ (PHD) ಪದವಿ ಲಭಿಸಿದೆ. ಇನ್ನೋರ್ವರು ಗುರುಕುಲದ ಹಿರಿಯ ವಿದ್ಯಾರ್ಥೀ ಶ್ರೀವಾಸುದೇವ ಐತಾಳ್ ಎಂಬುವವರು "O STUDY OF BRUHASPATI SUKTAS OF RIGVEDA" ಎಂಬ ಗ್ರಂಥಕ್ಕೆ ವಿದ್ಯಾವಾರಿಧಿ (PHD) ಪದವಿಯನ್ನು ಪಡೆದುಕೊಂಡಿದ್ದಾರೆ ಎಂಬುವುದು ಪ್ರಶಂಸನೀಯ. ಡಾ. ಪ್ರಜ್ವಲ ಇವರು ಕೇಂದ್ರೀಯ ಸಂಸ್ಕೃತ ವಿಶ್ವವಿದ್ಯಾಲಯದಲ್ಲಿ ವಿದ್ಯಾವಾರಿಧಿಪದವಿಯನ್ನು ಪಡೆದಿರುತ್ತಾರೆ.
- ಜುಲೈ 9 ರಂದು ಕರ್ನಾಟಕ ಸಂಸ್ಕೃತ ವಿಶ್ವವಿದ್ಯಾಲಯದ 9 ನೇ ಘಟಿಕೋತ್ಸವದಲ್ಲಿ ಗುರುಕುಲದ ಇಬ್ಬರು ವಿದ್ಯಾರ್ಥಿಗಳಿಗೆ ಸುವರ್ಣಪದಕ ಲಭಿಸಿರುವುದು ಉಲ್ಲೇಖನೀಯ.
- ಗುರುಕುಲದ ಹಿರಿಯ ವಿದ್ಯಾರ್ಥಿಯಾದ ಡಾ. ಪುಷ್ಕರ ಪರಾಗ ದೇವ ಪೂಜಾರಿ ಇವರು ಕಾಂಚಿ ಮಠದ ಆಶ್ರಯದಲ್ಲಿ ತೆನಾಲಿಯಲ್ಲಿ ನಡೆಯುವ ಶಾಸ್ತ್ರಪರೀಕ್ಷೆಯಲ್ಲಿ ಉತ್ತೀರ್ಣರಾಗಿ ವೇದಾಂತರತ್ನ ಎಂಬ ಬಿರುದನ್ನು ಪಡೆದಿರುತ್ತಾರೆ.

ಭಾರತೀಯ ಜ್ಞಾನಪರಂಪರೆಯ ರಕ್ಷಣೆ ಮತ್ತು ವ್ಯಕ್ತಿತ್ವ ನಿರ್ಮಾಣವೆಂಬ ಸಂಕಲ್ಪದಿಂದ ಆರಂಭವಾದ ಇಂತಹ ವಿಶಿಷ್ಟವಾದ ಗುರುಕುಲ ಶಿಕ್ಷಣಕ್ಕೆ ತಮ್ಮೆಲ್ಲರ ಸಹಕಾರ, ಬೆಂಬಲ ಮತ್ತು ಮಾರ್ಗದರ್ಶನವಿರಲೆಂದು ಕೋರಿಕೆ.

●

➢ ಪುಟ 3 ರಿಂದ.....

ಹೆಣ್ಣುಮಕ್ಕಳು ವಿದ್ಯಾವಂತರಾಗುವಂತೆ ಮಾಡುವುದು ನಮ್ಮ ಜವಾಬ್ದಾರಿಯಲ್ಲವೇ?" ಎಂದು ತಮ್ಮ ವಾದ ಮಂಡಿಸಿ ಸಾವಿರಾರು ಹೆಣ್ಣುಮಕ್ಕಳಿಗೆ ಉತ್ತಮ ಶಿಕ್ಷಣ ಸಿಗುವ ನೆಲೆವೀಡಾಗಿದೆ.

### ಉಪಕುಲಪತಿಗಳಾಗಿ

5 ವರ್ಷಗಳ ಕಾಲ ಬೆಂಗಳೂರು ವಿಶ್ವವಿದ್ಯಾಲಯದ ಉಪಕುಲಪತಿಗಳಾಗಿ ದೇಶಾದ್ಯಂತ ಅದರ ಕೀರ್ತಿ ಹಬ್ಬಲು ಕಾರಣೀಭೂತರಾದವರು ಡಾ॥ ಹೆಚ್‌ಎನ್. ಮೂಢನಂಬಿಕೆಗಳ ವಿರುದ್ಧ ನಡೆಸಿದ ಹೋರಾಟ, ನೃತ್ಯ, ನಾಟಕ ಮುಂತಾದ ಕಲಾಮಾಧ್ಯಮಗಳನ್ನು ಹಾಗೂ ಮನಶಾಸ್ತ್ರ, ಸೋಶಿಯಲ್ ವರ್ಕ್ ಮುಂತಾದ ವಿಷಯಗಳನ್ನು ವಿಶ್ವವಿದ್ಯಾಲಯದಲ್ಲಿ ಪ್ರಾರಂಭಿಸಿದ್ದರ ಶ್ರೇಯ ಅವರಿಗೇ ಸಲ್ಲುತ್ತದೆ. ಇಷ್ಟಲ್ಲದೆ ಸ್ವದೇಶೀ ಅಭಿಮಾನಿಯಾಗಿ 'ಕರೀಬಣ್ಣದ ಗೌನ್' ಅನ್ನು ತೆಗೆದುಹಾಕಿ ಪದವಿ ಪ್ರಧಾನ ಕ್ರಮವನ್ನು ಬಳಕೆಗೆ ತಂದದ್ದೂ ಅವರೇ!

### ಶಾಸಕರಾಗಿ

ಸರ್ಕಾರದಿಂದ ನಾಮ ನಿರ್ದೇಶಿತ ಸದಸ್ಯರಾಗಿ ಡಾ॥ ಹೆಚ್‌ಎನ್ ವಿಧಾನ ಪರಿಷತ್ತಿನ ಸದಸ್ಯರಾಗಿ 1980ರಿಂದ 86ರವರೆಗೆ 6 ವರ್ಷ ಶಿಕ್ಷಣಕ್ಕೆ ಸಂಬಂಧಿಸಿದ ಅನೇಕ ವಿಷಯಗಳನ್ನು ಪ್ರಸ್ತಾಪಿಸಿ ಅದರಲ್ಲಿ ಸುಧಾರಣೆ ತಂದರು. ಮುಖ್ಯವಾಗಿ 7ನೇ ತರಗತಿಯ ಪರೀಕ್ಷೆಯನ್ನು 'Public Exam' ಆಗಿ ಬದಲಿಸಿದ್ದು, ಕನ್ನಡ ಮಾಧ್ಯಮವೇ ಶಿಕ್ಷಣ ಮಾಧ್ಯಮವಾಗಿ ಪ್ರಾಥಮಿಕ ಹಂತದಲ್ಲಿ ಇರಬೇಕೆಂದು ವಾದಿಸಿದ್ದು ಅಷ್ಟೇ ಅಲ್ಲ ತಮ್ಮ ಸಂಸ್ಥೆಯಲ್ಲಿ ಅದನ್ನೇ ಅನುಸರಿಸಿ ತೋರಿಸಿದ್ದು ಅವರ ವಿಶೇಷತೆ.

ಭಾರತ ಸರ್ಕಾರ ಡಾ॥ ಹೆಚ್‌ಎನ್ ರಂತಹ 'ಶಿಕ್ಷಣ ಭೂಷಣ'ರಿಗೆ 1984ರಲ್ಲಿ 'ಪದ್ಮಭೂಷಣ' ಪ್ರಶಸ್ತಿ ನೀಡಿದ್ದು ಆ ಪ್ರಶಸ್ತಿಗೇ ಸಂದ ಭೂಷಣ.

●

ನಿಮ್ಮೊಳಗಿರುವುದನ್ನು ಪ್ರಯತ್ನ ಪೂರ್ವಕವಾಗಿ ಹೊರಹೊಮ್ಮಿಸಿ. – ಸ್ವಾಮಿ ವಿವೇಕಾನಂದ

# ಶಿಕ್ಷಣ ಸಚಿವರಿಗೆ ಮನವಿ

ಕ.ರಾ.ಮಾ.ಶಿ.ಸಂಘದ ಮತ್ತು ಎಬಿಆರ್‌ಎಸ್‌ಎಂನ ಪ್ರಮುಖರು ಮಾನ್ಯ ಬಿ. ಸಿ. ನಾಗೇಶ್ ಶಿಕ್ಷಣ ಸಚಿವರು ಹಾಗೂ ಶಿಕ್ಷಕ ಮತ್ತು ಪದವೀಧರ ಪ್ರತಿನಿಧಿಗಳು ಮತ್ತು ಶಿಕ್ಷಣ ಇಲಾಖೆಯ ಅಧಿಕಾರಿಗಳೊಂದಿಗೆ ಸಭೆಯಲ್ಲಿ ಶಿಕ್ಷಕರ ಮತ್ತು ಶೈಕ್ಷಣಿಕ ಸಮಸ್ಯೆಗಳನ್ನು ಚರ್ಚಿಸಿದರು. ಮಾನ್ಯ ಸಚಿವರು ಮತ್ತು ಇಲಾಖೆಯ ಅಧಿಕಾರಿಗಳು ಸಕಾರಾತ್ಮಕವಾಗಿ ಸ್ಪಂದಿಸಿದರು.

## ಪ್ರೌಢಶಾಲಾ ವಿಭಾಗದ ಸಮಸ್ಯೆಗಳು

1. ಪ್ರೌಢಶಾಲೆಗಳಲ್ಲಿ ವಿಶೇಷ ಶಿಕ್ಷಕರ ಹೆಚ್ಚುವರಿ ಪ್ರಕ್ರಿಯೆ.
2. ಬಡ್ತಿ ಶಿಕ್ಷಕರ ಕಾಲಮಿತಿ ವೇತನ ಬಡ್ತಿಯ ಬಗ್ಗೆ.
3. ಸಂಸ್ಕೃತ ಭಾಷೆಯ ವಿದ್ಯಾರ್ಥಿಗಳಿಗೆ ನಿಲ್ಲಿಸಿದ್ದ ವಿದ್ಯಾರ್ಥಿ ವೇತನವನ್ನು ಮರುಜಾರಿ ಮಾಡುವ ಕುರಿತು.
4. ಅನುದಾನಿತ ಶಿಕ್ಷಕರಿಗೆ ನಿಶ್ಚಿತ ಪಿಂಚಣಿ ಯೋಜನೆ ಜಾರಿಮಾಡುವ ಕುರಿತು ಸ್ವಾತಂತ್ರ ಉದ್ಯಾನವನದಲ್ಲಿ ನಡೆಯುತ್ತಿರುವ ಧರಣಿನಿರತರ ಜೊತೆಯಲ್ಲಿ ಮುಖ್ಯ ಮಂತ್ರಿಗಳ ಸಭೆ ಆಯೋಜಿಸುವ ಕುರಿತು.
5. ಹಿಂದಿ ಶಿಕ್ಷಣದ ಅಭಿವೃದ್ಧಿಯ ದೃಷ್ಟಿಯಿಂದ ಜಿಲ್ಲೆಗೆ ಒಂದರಂತೆ ಹಿಂದಿ ವಿಷಯ ಪರಿವೀಕ್ಷಕರ ನೇಮಕ ಮತ್ತು ಪ್ರೌಢಶಾಲೆಗಳಲ್ಲಿ ಹಿಂದಿ ವಿಷಯಕ್ಕೆ 5 ಅವಧಿಗಳನ್ನು ನೀಡುವ ಕುರಿತು.
6. ದೈಹಿಕ ಶಿಕ್ಷಣದ ಅಭಿವೃದ್ಧಿಗಾಗಿ ಮಂಡನೆಯಾದ ವೈದ್ಯನಾಥ ವರದಿಯ ಅನುಷ್ಠಾನದ ಬಗ್ಗೆ.
7. ಕಾಲ್ಪನಿಕ ವೇತನ ಬಡ್ತಿ.
8. ಶಿಕ್ಷಕರಿಗೆ ಒಂದು ಬಾರಿ ಬಯಸಿದ ಜಿಲ್ಲೆಗಳಿಗೆ ವರ್ಗಾವಣೆಗೆ ಅವಕಾಶ ನೀಡುವ ಬಗ್ಗೆ.
9. ಡಯಟ್ ಮತ್ತು ಸಿ.ಟಿ.ಇ.ಗಳ ಪುನಃರಚನೆಯಲ್ಲಿ ಪ್ರೌಢಶಾಲಾ ಶಿಕ್ಷಕರ ಸಮಾಂತರ ಹುದ್ದೆಗಳನ್ನು ಹೆಚ್ಚಿಸುವ ಬಗ್ಗೆ.
10. ಅನುದಾನ ರಹಿತ ಶಾಲೆಗಳಲ್ಲಿ ಕಾರ್ಯಮಾಡುವ ಶಿಕ್ಷಕರಿಗೆ ಇಲಾಖೆಯ ಎಲ್ಲಾ ತರಬೇತಿಯನ್ನು ನೀಡುವ ಕುರಿತು.
11. ಜಿಲ್ಲಾ ಹಂತದಲ್ಲಿ ಶೈಕ್ಷಣಿಕ ಅದಾಲತ್ ನಡೆಸುವ ಬಗ್ಗೆ.
12. ಜೆ.ಓ.ಸಿ. ಯಿಂದ ವಿಲೀನಗೊಂಡ ವೃತ್ತಿಶಿಕ್ಷಕರ ವೇತನ ಸರಿಪಡಿಸುವ ಬಗ್ಗೆ.
13. 8, 9 ಮತ್ತು 10 ತರಗತಿಗಳಿಗೆ ವಿಭಿನ್ನ ಪರೀಕ್ಷಾ ಪದ್ಧತಿ ಇದ್ದು, ಇದರಿಂದ 10ನೇ ತರಗತಿಯ ಪರೀಕ್ಷೆಯ ಮೇಲೆ ಋಣಾತ್ಮಕ ಪರಿಣಾಮ ಬೀರುತ್ತಿದೆ. ಆದ್ದರಿಂದ 10ನೇ ತರಗತಿಗೆ ಅನುಸರಿಸುವ ಪದ್ಧತಿಯನ್ನೇ ಉಳಿದ ತರಗತಿಗೂ ಅನುಸರಿಸುವ ಬಗ್ಗೆ.
14. ಅನುದಾನ ರಹಿತ ಪ್ರೌಢಶಾಲೆ ಮತ್ತು ಪಿ.ಯು ಕಾಲೇಜುಗಳನ್ನು ಅನುದಾನಕ್ಕೆ ಒಳಪಡಿಸುವ ಬಗ್ಗೆ.
15. ಖಾಲಿ ಇರುವ ಅನುದಾನಿತ ಮತ್ತು ಸರ್ಕಾರಿ ಶಿಕ್ಷಕರ/ ಉಪನ್ಯಾಸಕರ ಹುದ್ದೆಗಳನ್ನು ತುಂಬುವುದು.
16. ಅನುದಾನಿಯ ಶಿಕ್ಷಕರಿಗೆ "ಜ್ಯೋತಿ ಸಂಜೀವಿನಿ" ಜಾರಿಮಾಡುವ ಕುರಿತು.

## ಪದವಿ ಪೂರ್ವ ಶಿಕ್ಷಣ ವಿಭಾಗದ ಸಮಸ್ಯೆಗಳು

1. ವೃತ್ತಿ ಶಿಕ್ಷಣ (ಜೆ.ಓ.ಸಿ) ಇಲಾಖೆಯಿಂದ ಪದವಿ ಪೂರ್ವ ಶಿಕ್ಷಣ ಇಲಾಖೆಯಲ್ಲಿ ವಿಲೀನಗೊಂಡ ಉಪನ್ಯಾಸಕರಿಗೆ ಬಿಎಡ್ ವಿನಾಯಿತಿ ನೀಡಿ ಪ್ರೊಬೆಷನರಿ ಅವಧಿ ಘೋಷಿಸುವ ಬಗ್ಗೆ.
2. ಪ್ರೌಢಶಾಲೆಗಳಿಂದ ಪದವಿಪೂರ್ವ ಹಂತಕ್ಕೆ 50:50 ಅನುಪಾತದಲ್ಲಿ ಬಡ್ತಿ ನೀಡುವುದು.
3. ಉಪನ್ಯಾಸಕರಿಗೆ ನಿಯಮಿತವಾಗಿ ಪ್ರಾಚಾರ್ಯರ ಹುದ್ದೆಗಳಿಗೆ ಬಡ್ತಿ ನೀಡುವ ಕುರಿತು.
4. ಬಡ್ತಿ ಉಪನ್ಯಾಸಕರ ಕಾಲಮಿತಿ ವೇತನ ಬಡ್ತಿಯ ಬಗ್ಗೆ.
5. ವ್ಯವಹಾರ ಅಧ್ಯಯನ ಮತ್ತು ಲೆಕ್ಕಶಾಸ್ತ್ರ ವಿಷಯಗಳನ್ನು ಆಧುನಿಕವಾಗಿ ಮತ್ತು ಪ್ರಾಯೋಗಿಕವಾಗಿ ಬೋಧಿಸಲು ವಿಷಯವಾರು ಪ್ರತ್ಯೇಕ ಉಪನ್ಯಾಸಕರನ್ನು ನೇಮಿಸುವುದು. ಅದಕ್ಕಾಗಿ ಸಮಿತಿ ರಚಿಸುವ ಬಗ್ಗೆ.
6. ವಿಭಾಗ ಹಂತದಲ್ಲಿ ಶೈಕ್ಷಣಿಕ ಅದಾಲತ್ ನಡೆಸುವುದು.
7. ಜೆ.ಓ.ಸಿ. ಯಿಂದ ವಿಲೀನಗೊಂಡ ಶಿಕ್ಷಕರ/ ಉಪನ್ಯಾಸಕರ ಖಾಯಂ ಪೂರ್ವ ಸೇವಾ ಅವಧಿಯನ್ನು ಪರಿಗಣಿಸಿ ನಿಶ್ಚಿತ ಪಿಂಚಣಿಗೆ ಒಳಪಡಿಸುವುದು.
8. ದ್ವಿತೀಯ ಪಿ.ಯು.ಸಿ ಮೌಲ್ಯಮಾಪನ ಕೇಂದ್ರಗಳನ್ನು ಜಿಲ್ಲಾ ಕೇಂದ್ರಗಳಲ್ಲಿ ಆಯೋಜಿಸುವ ಕುರಿತು. ●

# ಕರ್ತವ್ಯ ಬೋಧ ದಿವಸ

ಕ. ರಾ. ಮಾ. ಶಿ. ಸಂಘ ಬೆಂಗಳೂರು ದಕ್ಷಿಣ ವಿಭಾಗದ ವತಿಯಿಂದ ಸರ್ಕಾರಿ ಪದವಿ ಪೂರ್ವ ಕಾಲೇಜು ಪ್ರೌಢಶಾಲಾ ವಿಭಾಗ ಕಾಡುಗೋಡಿ ಇಲ್ಲಿ ಕರ್ತವ್ಯ ಬೋಧ ದಿವಸವನ್ನು ಆಚರಿಸಲಾಯಿತು. ವಿಶೇಷ ಉಪನ್ಯಾಸ ನೀಡಿದ ಡಾ. ವೆಂಕಟರಮಣ ದೇವರು ಭಟ್ಟರವರು ಕರ್ತವ್ಯ ಬೋಧ ದಿವಸದ ಆಚರಣೆಯ ಹಿನ್ನೆಲೆ, ಮಹತ್ವ, ಭಾರತ ದೇಶದ ಹಿರಿಮೆ, ಈ ದೇಶಕ್ಕೆ ಸ್ವಾಮಿ ವಿವೇಕಾನಂದರ ಮತ್ತು ಸುಭಾಸ್ ಚಂದ್ರ ಬೋಸ್‌ರವರ ಕೊಡುಗೆಗಳನ್ನ ವಿವರಿಸುತ್ತ ರಾಷ್ಟ್ರ ನಿರ್ಮಾಣದಲ್ಲಿ ಶಿಕ್ಷಕರ ಪಾತ್ರ ಮತ್ತು ಕರ್ತವ್ಯಗಳ ಬಗ್ಗೆ ತಿಳಿಸಿಕೊಟ್ಟರು. ಕಾರ್ಯಕ್ರಮದ ಆರಂಭದಲ್ಲಿ ಪ್ರೌಢ ಶಾಲೆಯ ವಿದ್ಯಾರ್ಥಿಗಳು ಪ್ರಾರ್ಥನೆ ಮಾಡಿದರು. ದೀಪ ಬೆಳಗಿಸಿ ಭಾರತ ಮಾತೆ, ಸುಭಾಸ್ ಚಂದ್ರ ಬೋಸ್ ಮತ್ತು ಸ್ವಾಮಿ ವಿವೇಕಾನಂದರ ಭಾವಚಿತ್ರಗಳಿಗೆ ಪುಷ್ಪ ನಮನ ಸಲ್ಲಿಸಲಾಯಿತು. ಉಪಪ್ರಾಂಶುಪಾಲರಾದ ಶ್ರೀ ಮುನಿರಾಜುರವರು ಸ್ವಾಗತ ಕೋರಿದರು. ಶ್ರೀ ಮಾರೇಗೌಡರು ಸಂಕಲ್ಪ ವಿಧಿ ಬೋಧಿಸಿದರು. ಶ್ರೀ ಚನ್ನಕೃಷ್ಣಪ್ಪರವರು ಪ್ರಾಸ್ತಾವಿಕ ನುಡಿಗಳನ್ನು ಆಡಿದರು. ಶ್ರೀ ಮಂಜುನಾಥ ಬಿ. ಕೆ. ರವರು ವಂದನಾರ್ಪಣೆ ಮಾಡಿದರು. ವೇದಿಕೆಯ ಮೇಲೆ ಶ್ರೀ ಯೋಗೇಶ ಸಿ.ಆರ್.ಪಿ ಕಾಡುಗೋಡಿ ಕ್ಲಸ್ಟರ್ ಹಾಗೂ ಶ್ರೀಮತಿ ಸುಮಿತ್ರ ಅಧ್ಯಕ್ಷರು ಎಸ್.ಡಿ.ಎಂ.ಸಿ ರವರು ಉಪಸ್ಥಿತರಿದ್ದರು. ವಿವಿಧ ಶಾಲೆಗಳಿಂದ ಶಿಕ್ಷಕರು ಭಾಗವಹಿಸಿದ್ದರು. ಶ್ರೀಮತಿ ಇಂದ್ರಾಣಿ ರವರು ಕಾರ್ಯಕ್ರಮದ ನಿರೂಪಣೆ ಮಾಡಿದರು. ●

# ಕರ್ನಾಟಕ ಸರ್ಕಾರದ ನಡವಳಿಗಳು

**ವಿಷಯ : ಅನುದಾನಿತ ಶಿಕ್ಷಣ ಸಂಸ್ಥೆಗಳ ಸಿಬ್ಬಂದಿಗಳ ವಿವಿಧ ಬೇಡಿಕೆಗಳನ್ನು ಪರಿಶೀಲಿಸಲು ಸರ್ಕಾರಕ್ಕೆ ತಗಲಬಹುದಾದ ಆರ್ಥಿಕ ವೆಚ್ಚವನ್ನು ಅಂದಾಜಿಸಲು ಸಮಿತಿಯನ್ನು ರಚಿಸುವ ಬಗ್ಗೆ**

**ಓದಲಾಗಿದೆ :** ಮಾನ್ಯ ಶಾಲಾ ಶಿಕ್ಷಣ ಮತ್ತು ಸಾಕ್ಷರತಾ ಸಚಿವರ ಅಧ್ಯಕ್ಷತೆಯಲ್ಲಿನ ದಿನಾಂಕ :20.01.2023 ರ ಸಭೆಯಲ್ಲಿ ನೀಡಿದ ನಿರ್ದೇಶನ.

**ಪ್ರಸ್ತಾವನೆ:** 20.01.2023 ರಂದು ಮಾನ್ಯ ಶಾಲಾ ಶಿಕ್ಷಣ ಮತ್ತು ಸಾಕ್ಷರತಾ ಸಚಿವರ ಅಧ್ಯಕ್ಷತೆಯಲ್ಲಿ ವಿಧಾನ ಪರಿಷತ್ತಿನ ಸದಸ್ಯರನ್ನು ಒಳಗೊಂಡ ಸಭೆಯಲ್ಲಿ ಹಲವಾರು ದಿನಗಳಿಂದ ಅನುದಾನಿತ ಶಿಕ್ಷಣ ಸಂಸ್ಥೆಗಳ ಸಿಬ್ಬಂದಿಗಳ ವಿವಿಧ ಬೇಡಿಕೆಗಳನ್ನು ಪರಿಶೀಲಿಸಿ ಇದಕ್ಕೆ ತಗಲುವ ಆರ್ಥಿಕ ವೆಚ್ಚವನ್ನು ಲೆಕ್ಕಹಾಕಲು ಒಂದು ಸಮಿತಿಯನ್ನು ರಚಿಸುವಂತೆ ನಿರ್ದೇಶನ ನೀಡಿರುತ್ತಾರೆ.

ಈ ಹಿನ್ನೆಲೆಯಲ್ಲಿ ಅನುದಾನಿತ ಶಿಕ್ಷಣ ಸಂಸ್ಥೆಗಳ ಸಿಬ್ಬಂದಿಗಳಿಗೆ ಅನುದಾನರಹಿತ ಸೇವೆಯನ್ನು ಪರಿಗಣಿಸಿ ಕಾಲನಿಕ ವೇತನ ಜಾರಿಗೊಳಿಸುವ ಬಗ್ಗೆ, ರಾಷ್ಟ್ರೀಯ ಪಿಂಚಣಿ ಯೋಜನ (NPS) ಯನ್ನು ಜಾರಿಗೆ ತರುವ ಬಗ್ಗೆ ಹಾಗೂ ಜ್ಯೋತಿ ಸಂಜೀವಿನಿ ಯೋಜನೆಯನ್ನು ಅನುಷ್ಠಾನಗೊಳಿಸುವ ಬಗ್ಗೆ ನಿಖರವಾದ ಮಾಹಿತಿ ಮತ್ತು ದತ್ತಾಂಶಗಳನ್ನು ಕ್ರೂಢೀಕರಿಸಿ ಸರ್ಕಾರಕ್ಕೆ ತಗುಲಬಹುದಾದ ಆರ್ಥಿಕ ವೆಚ್ಚವನ್ನು ಅಂದಾಜಿಸಿ 30 ದಿನಗಳ ಒಳಗಾಗಿ ವರದಿ ಸಲ್ಲಿಸಲು ಸಮಿತಿಯನ್ನು ರಚಿಸಲು ತೀರ್ಮಾನಸಲಾಗಿದೆ. ಆದ್ದರಿಂದ ಈ ಕೆಳಕಂಡಂತೆ ಆದೇಶಿಸಿದೆ.

**ಸರ್ಕಾರದ ಆದೇಶ ಸಂಖ್ಯೆ: ಇಪಿ 54 ಎಸ್‌ಇಎಸ್ 2023**
**ಬೆಂಗಳೂರು, ದಿನಾಂಕ: 21.01.2023**

ಪ್ರಸ್ತಾವನೆಯಲ್ಲಿ ವಿವರಿಸಿದ ಅಂಶಗಳ ಹಿನ್ನೆಲೆಯಲ್ಲಿ, ಅನುದಾನಿತ ಶಿಕ್ಷಣ ಸಂಸ್ಥೆಗಳ ಸಿಬ್ಬಂದಿಗಳಿಗೆ ಅನುದಾನರಹಿತ ಸೇವೆಯನ್ನು ಪರಿಗಣಿಸಿ ಕಾಲ್ಪನಿಕ ವೇತನ ಜಾರಿಗೊಳಿಸುವ ಬಗ್ಗೆ ರಾಷ್ಟ್ರೀಯ ಪಿಂಚಣಿ ಯೋಜನೆ (NPS) ಯನ್ನು ಜಾರಿಗೆ ತರುವ ಬಗ್ಗೆ ಹಾಗೂ ಜ್ಯೋತಿ ಸಂಜೀವಿನ ಯೋಜನೆಯನ್ನು ಅನುಷ್ಠಾನಗೊಳಿಸುವ ಬಗ್ಗೆ ನಿಖರವಾದ ಮಾಹಿತಿ ಮತ್ತು ದತ್ತಾಂಶಗಳನ್ನು ಕ್ರೂಢೀಕರಿಸಿ ಸರ್ಕಾರಕ್ಕೆ ತಗುಲಬಹುದಾದ ಆರ್ಥಿಕ ವೆಚ್ಚವನ್ನು ಅಂದಾಜಿಸಿ ವರದಿ ಸಲ್ಲಿಸಲು ಈ ಕೆಳಕಂಡಂತೆ ಸಮಿತಿಯನ್ನು ರಚಿಸಿ ಆದೇಶಿಸಿದೆ.

**ಅಧ್ಯಕ್ಷರು –** (1) ಸರ್ಕಾರದ ಪ್ರಧಾನ ಕಾರ್ಯದರ್ಶಿ, ಶಾಲಾ ಶಿಕ್ಷಣ ಮತ್ತು ಸಾಕ್ಷರತಾ ಇಲಾಖೆ, ಬಹುಮಹಡಿ ಕಟ್ಟಡ, ಬೆಂಗಳೂರು.

**ಸದಸ್ಯರು –** (2) ಆಯುಕ್ತರು, ಸಾರ್ವಜನಿಕ ಶಿಕ್ಷಣ ಇಲಾಖೆ, ಬೆಂಗಳೂರು (3) ಅಪರ ಆಯುಕ್ತರು, ಸಾರ್ವಜನಿಕ ಶಿಕ್ಷಣ ಇಲಾಖೆ, ಕಲಬುರಗಿ (4) ಅಪರ ಆಯುಕ್ತರು, ಸಾರ್ವಜನಿಕ ಶಿಕ್ಷಣ ಇಲಾಖೆ, ಧಾರವಾಡ (5) ಆಂತರಿಕ ಆರ್ಥಿಕ ಸಲಹೆಗಾರರು, ಶಾಲಾ ಶಿಕ್ಷಣ ಮತ್ತು ಸಾಕ್ಷರತಾ ಇಲಾಖೆ (6) ಸರ್ಕಾರದ ಉಪ ಕಾರ್ಯದರ್ಶಿ (ಸೇವೆಗಳು–1), ಶಾಲಾ ಶಿಕ್ಷಣ ಮತ್ತು ಸಾಕ್ಷರತಾ ಇಲಾಖೆ.

**ಸದಸ್ಯ ಕಾರ್ಯದರ್ಶಿ** (7) ನಿರ್ದೇಶಕರು (ಪ್ರೌಢಶಿಕ್ಷಣ), ಆಯುಕ್ತರ ಕಚೇರಿ ಸಾರ್ವಜನಿಕ ಶಿಕ್ಷಣ ಇಲಾಖೆ, ಬೆಂಗಳೂರು.

ಸದರಿ ಸಮಿತಿಯು ಅನುದಾನತ ಶಿಕ್ಷಣ ಸಂಸ್ಥೆಗಳ ಸಿಬ್ಬಂದಿ ಹಾಗೂ ನಿವೃತ್ತ ಸಿಬ್ಬಂದಿಗಳ ವಿವಿಧ ಬೇಡಿಕೆಗಳಿಂದ ಸರ್ಕಾರಕ್ಕೆ ತಗುಲಬಹುದಾದ ಆರ್ಥಿಕ ವೆಚ್ಚವನ್ನು ಅಂದಾಜಿಸಿ 30 ದಿನಗಳ ಒಳಗಾಗಿ ವರದಿ ಸಲ್ಲಿಸಲು ಸೂಚಿಸಿದೆ.

ಕರ್ನಾಟಕ ರಾಜ್ಯಪಾಲರ ಆಜ್ಞಾನುಸಾರ ಮತ್ತು ಅವರ ಹೆಸರಿನಲ್ಲಿ

**(ವಿ. ಶ್ರೀನಿವಾಸಮೂರ್ತಿ)**

ಸರ್ಕಾರದ ಅಧೀನ ಕಾರ್ಯದರ್ಶಿ (ಪ್ರೌಢ), ಶಾಲಾ ಶಿಕ್ಷಣ ಮತ್ತು ಸಾಕ್ಷರತಾ ಇಲಾಖೆ.

➢ ಪುಟ 5 ರಿಂದ.....

ಹರಿನಾಮ ಸಂಕೀರ್ತನೆ ಮಾಡುತ್ತ, ಹಳ್ಳಿಹಳ್ಳಿಗಳಲ್ಲಿ ಸಂಚರಿಸುತ್ತ, ಮಧುಕರವೃತ್ತಿ ಮಾಡುತ್ತ ತೀರ್ಥಕ್ಷೇತ್ರಗಳನ್ನು ದರ್ಶಿಸುತ್ತ ಮನೆಯ ಬಂಧನವನ್ನು ತೊರೆದು ಬಂದ ಕರ್ನಾಟಕದ 'ಪ್ರಥಮ ಹರಿದಾಸ ಮಹಿಳೆ' ಎನಿಸಿಕೊಂಡರು ಅಂಬಾಬಾಯಿ. ತಮ್ಮ 28 ನೆಯ ವಯಸ್ಸಿನಲ್ಲಿ ಭಕ್ತಿಸಾಹಿತ್ಯವನ್ನು ರಚಿಸಲು ತೊಡಗಿದ ಅಂಬಾಬಾಯಿ ನಂತರ ಜೀವಿಸಿದ್ದು ಕೇವಲ 10–12 ವರ್ಷಗಳು ಮಾತ್ರ. ಆದರೆ ಅವರು ರಚಿಸಿದ ಕೃತಿಗಳ ಸಂಖ್ಯೆ ಅಪಾರ.

**ಅಷ್ಟಭಾಗ್ಯಗಧಿಕ ಲಾಭವು । ದಾಸತನವು**
**ಶ್ರೇಷ್ಠ ಗುರುಗಳಿಂದ ದೊರಕಿತು**
**ಇಷ್ಟವೆನಗೆ ದಾಸಪೆಸರು**
**ಶಿಷ್ಟರೆಲ್ಲ ಕರೆಯಲೀಗ**
**ತುಷ್ಟಿಪಡುವೆ ಶ್ರೀ ಗೋಪಾಲ**
**ಕೃಷ್ಣವಿಠಲ ಸಲಹೆ ಎಂದು**

'ಗೋಪಾಲಕೃಷ್ಣ ವಿಠಲ' ಎಂಬ ಅಂಕಿತದಲ್ಲಿ ದೊರೆತಿರುವ ಕೀರ್ತನೆಗಳು ಸುಮಾರು 300. ಇವುಗಳಲ್ಲಿ ಹರಿಸ್ತುತಿ, ಕೃಷ್ಣನ ಬಾಲಲೀಲೆ, ಶ್ರೀನಿವಾಸ ವೈಭವ. ಪಾಂಡುರಂಗನ ಭಕ್ತವಾತ್ಸಲ್ಯ, ಮುಂತಾದವುಗಳನ್ನು ವಿವರಿಸಲಾಗಿದೆ. ಇವಲ್ಲದೆ ಗುರುವಿನ ಮಹಿಮೆಯನ್ನು ಕುರಿತ ಕೀರ್ತನೆಗಳು, ತತ್ತ್ವನಿರೂಪಣೆಯ ಕೃತಿಗಳು, ನದೀದೇವತೆಗಳ ಸ್ತುತಿ ಹೀಗೆ ಅಂಬಾಬಾಯಿಯವರ ಸಾಹಿತ್ಯರಚನೆಯ ವೈವಿಧ್ಯ ವಿಸ್ಮಯಗೊಳಿಸುತ್ತದೆ. ಗುರುಗಳ ನಿಧನದ ನಂತರ ಹೆಚ್ಚುಕಾಲವನ್ನು ತೀರ್ಥಯಾತ್ರೆಯಲ್ಲಿಯೇ ಕಳೆಯುತ್ತಾ ನಲವತ್ತು ಮೂರರ ವಯಸ್ಸಿನಲ್ಲಿ ನಿಧನರಾದ ಅಂಬಾಬಾಯಿಯವರು ಗುರುಕರುಣೆಯಿಂದ ಹರಿದಾಸ ದೀಕ್ಷೆ ಪಡೆದು ತಮ್ಮ ಕೀರ್ತನೆಗಳಿಂದ, ಮಹಾಕಾವ್ಯದಿಂದ ಅಮರರಾದರು.

**ಅರಿಯೆ ವೇದಾಧರ್ಮವನು**
**ಅರಿಯೆ ಆಗಮಗ್ರಂಥ**
**ಅರಿಯೆನು ಶೃತಿ ಸ್ಮೃತಿಯ ಗೂಢ ತತ್ತ್ವ**
**ಅರಿಯದಿದ್ದರು ಶಾಸ್ತ್ರ**
**ಗುರುಕರುಣ ಬಲದಿಂದ**
**ಅರಿತಷ್ಟು ವರ್ಣಿಸುವೆ ರಾಮಚಂದ್ರ**

ಎಂದು ರಾಮಚರಿತೆಯನ್ನು ಆರಂಭಿಸಿದ ಅಂಬಾಬಾಯಿಯವರು ಕೇವಲ ಎರಡೂವರೆ ತಿಂಗಳುಗಳ ಅವಧಿಯಲ್ಲಿ ಒಂದು ಮಹಾಕಾವ್ಯವನ್ನು ಬರೆದು ಮುಗಿಸಿದರೆಂದರೆ ಅವರದು ಅದ್ಭುತ ಪ್ರತಿಭೆ,ಸಂಸ್ಕಾರ ಮತ್ತು ದೈವ ಕೃಪೆಯಲ್ಲದೆ ಬೇರೇನೂ ಅಲ್ಲವೆನಿಸುತ್ತದೆ.

ಇಂತಹ ಜ್ವಲಂತ ಉದಾಹರಣೆಯನ್ನು ನೋಡಿದಾಗ ಕವಿರಾಜಮಾರ್ಗಕಾರನು ಬರೆದ ಕನ್ನಡಿಗರು 'ಕುರಿತೋದದೆಯಂ ಕಾವ್ಯಪ್ರಯೋಗ ಪರಿಣತ ಮತಿಗಳ್' ಎಂಬ ಮಾತು ಅದೆಷ್ಟು ಸತ್ಯವೆಂಬುದು ಅರಿವಾಗುತ್ತದೆ. ●

**ಯಾರ ಕೃಪೆಯು ಮೂಖನನ್ನು ವಾಚಾಳಿಯನ್ನಾಗಿ ಮಾಡುವುದೋ, ಕುಂಟನು ಪರ್ವತವನ್ನು ಲಂಘಿಸುವಂತೆ ಮಾಡುವುದೋ ಅಂತಹ ಪರಮಾನಂದ ಸ್ವರೂಪನಾದ ಮಾಧವನನ್ನು ವಂದಿಸುತ್ತೇನೆ.**

**– ಭಗವದ್ಗೀತೆ**

**ಮಹಿಳೆಯರ ಸ್ಥಿತಿ ಉತ್ತಮಗೊಂಡಲ್ಲದೆ ಜಗತ್ತು ಮೇಲಾಗುವುದಕ್ಕೆ ಅವಕಾಶವಿಲ್ಲ. – ಸ್ವಾಮಿ ವಿವೇಕಾನಂದ**

# ವಿವಿಧೆಡೆಗಳಲ್ಲಿ ನಡೆದ ಕರ್ತವ್ಯ ಬೋಧ ದಿನ

**ಬಳ್ಳಾರಿ ಜಿಲ್ಲೆ :** ಕರ್ತವ್ಯ ಬೋಧ ದಿನದ ರಾಷ್ಟ್ರೋತ್ಥಾನ ಶಾಲೆಯ ಕಾರ್ಯಕ್ರಮದಲ್ಲಿ ಹಗರಿಬೊಮ್ಮನಹಳ್ಳಿ ಕ್ಷೇತ್ರ ಶಿಕ್ಷಣಾಧಿಕಾರಿ ಶ್ರೀ ಹೆಚ್ ಬಿ ಆನಂದರವರು ಮುಖ್ಯ ಅತಿಥಿಗಳಾಗಿ ಭಾಗವಹಿಸಿದ್ದರು. ಮುಖ್ಯ ಅಧ್ಯಾಪಕರಾದ ಶ್ರೀ ಎಂ ಪಾಪಣ್ಣ ವಕ್ತಾರರಾಗಿ ಮಾಧ್ಯಮಿಕ ಶಿಕ್ಷಕ ಸಂಘದ ಉಪಾಧ್ಯಕ್ಷ ಆರ್ ಕೊಟ್ರಪ್ಪ ಇತರೆ ಶಿಕ್ಷಕರು ಸಂಕಲ್ಪ ಭೋದನೆ ಬಗ್ಗೆ ಮಾಹಿತಿ ವಿನಿಮಯ ಮಾಡಿಕೊಂಡರು.

**ಬೆಳಗಾವಿ ಜಿಲ್ಲೆ :** ದಿನಾಂಕ 21 ಜನವರಿ 2023 ರಂದು ಜಿಲ್ಲಾ ಘಟಕ ಬೆಳಗಾವಿ ವತಿಯಿಂದ ಜಿ ಜಿ ಚಿಟ್ನಿಸ್ ಆಂಗ್ಲ ಮಾಧ್ಯಮ ಶಾಲೆಯ ಸಭಾಂಗಣದಲ್ಲಿ ಕರ್ತವ್ಯ ಬೋಧ ದಿನವನ್ನು ಮಧ್ಯಾಹ್ನ 12 ಗಂಟೆಗೆ ಆಚರಿಸಲಾಯಿತು. ಶ್ರೀ ವಿ ಎನ್ ಜೋಷಿ, ನಿವೃತ್ತ ಪ್ರಾಚಾರ್ಯರು, ಆರ್.ಎಲ್.ಎಸ್ ಕಾಲೇಜು, ಬೆಳಗಾವಿ ಇವರು ಉಪನ್ಯಾಸ ನೀಡಿದರು. ಶ್ರೀ ಆರ್.ಪಿ ಒಂಟಗೋಡೆ, ಶ್ರೀ ಸಂಜೀವ ಕೋಷ್ಟಿ, ಶ್ರೀ ವಿಶ್ವಜೀತ ಹಾಸ್ಬೆ, ಶ್ರೀಮತಿ ನವೀನ ಶೆಟ್ಟಿಗಾರ್, ಮಹಿಳಾ ಪ್ರಮುಖ್, ಶ್ರೀಮತಿ ರೋಹಿಣಿ ನಾಯಕ್, ಕ.ರಾ.ಮಾ.ಶಿ.ಸಂಘದ ರಾಜ್ಯ ಉಪಾಧ್ಯಕ್ಷರು ಕಾರ್ಯಕ್ರಮದಲ್ಲಿ ಉಪಸ್ಥಿತರಿದ್ದರು. ಈ ಸಂದರ್ಭದಲ್ಲಿ ದೈಹಿಕ ಶಿಕ್ಷಕ ಸಂಘದ ಜಿಲ್ಲಾ ಅಧ್ಯಕ್ಷರಾಗಿ ಆಯ್ಕೆಯಾದ ಒಂಟಗೋಡೆ ಅವರಿಗೆ ಸತ್ಕರಿಸಲಾಯಿತು. ಶ್ರೀಮತಿ ರೋಹಿಣಿ ನಾಯಕ್‌ರವರು ಸಭೆಯಲ್ಲಿದ್ದ ಶಿಕ್ಷಕರೆಲ್ಲರಿಗೂ ಪ್ರಮಾಣ ಬೋಧನೆ ಮಾಡಿದರು. ಶ್ರೀಮತಿ ನವೀನ ಶೆಟ್ಟಿಗಾರ್ ಇವರು ಎಲ್ಲರಿಗೂ ಸ್ವಾಗತಿಸಿದರು, ಶ್ರೀ ಸುರೇಶ್ ಕಲ್ಲೇಕಾರ್ ಇವರು ವಂದನೆ ಸಲ್ಲಿಸಿದರು.

**ಗುಲ್ಬರ್ಗ ಜಿಲ್ಲೆ :** ಜನವರಿ 12, 2023 ರಂದು ಕರ್ತವ್ಯ ಬೋಧ ದಿನವನ್ನು ಸರ್ಕಾರಿ ಪ್ರೌಢಶಾಲೆ, ಚಿತ್ತಾಪುರದಲ್ಲಿ ಆಚರಿಸಲಾಯಿತು. ಕಾರ್ಯಕ್ರಮದಲ್ಲಿ ಶಾಲೆಯ ಮುಖ್ಯ ಗುರುಗಳಾದ ಶ್ರೀ ಕಾಶಿರಾಯ ಎಸ್, ಶ್ರೀ ರವಿ ಬಿಕೆ, ಶ್ರೀ ಹಯ್ಯಾಳಿ ಕನ್ನಡ ಪಂಡಿತ್, ಶ್ರೀ ನರಸಿಂಹ ಆಲ್ಮೇಲ್ಕರ್ ಚಿತ್ರಕಲಾ ಶಿಕ್ಷಕರು, ಶ್ರೀಮತಿ ರೇಖಾ ಮನಗೂಳಿಕರ್, ಶ್ರೀಮತಿ ರಾಜಲಕ್ಷ್ಮಿ, ಕುಮಾರಿ ವಿಜಯಲಕ್ಷ್ಮಿ, ಶ್ರೀಮತಿ ಸಯ್ಯದ ಹರ್ಷಿಯಾ ತರನುಮ್, ಶ್ರೀಮತಿ ಫರ್ಜನ ಬೇಗಂ, ಶ್ರೀಮತಿ ಸಬಿಹ ಯಾಸ್ಮಿನ್, ಕಾರ್ಯಕ್ರಮದಲ್ಲಿ ಭಾಗವಹಿಸಿದ್ದರು.

**ಬೆಂಗಳೂರು ಉತ್ತರ ಜಿಲ್ಲೆ :** ದಿನಾಂಕ 23-1-2023ರ ಸೋಮವಾರ ಕರ್ನಾಟಕ ರಾಜ್ಯ ಮಾಧ್ಯಮಿಕ ಶಿಕ್ಷಕ ಸಂಘ, ಬೆಂಗಳೂರು ಉತ್ತರ ಜಿಲ್ಲೆಯ ವತಿಯಿಂದ ಜನವರಿ 12ರ ಶ್ರೀ ಸ್ವಾಮಿ ವಿವೇಕಾನಂದರ ಜಯಂತಿ ಹಾಗೂ ಜನವರಿ 23ರ ನೇತಾಜಿ ಸುಭಾಷ್ ಚಂದ್ರ ಭೋಸ್ ಜಯಂತಿಯ ಸಂದರ್ಭದಲ್ಲಿ ಇಬ್ಬರೂ ಮಹಾನ್ ರಾಷ್ಟ್ರ ನಾಯಕರನ್ನು ಸ್ಮರಿಸುತ್ತಾ ಅವರ ತತ್ವ, ಸಿದ್ಧಾಂತಗಳು ಮತ್ತು ಆದರ್ಶಗಳನ್ನು ಇಂದಿನ ಪೀಳಿಗೆಯಲ್ಲಿ ಪ್ರಚುರ ಪಡಿಸುವ ಮತ್ತು ರಾಷ್ಟ್ರದ ಭವಿಷ್ಯ ರೂಪಿಸುವಲ್ಲಿ ಮಹತ್ತರ ಪಾತ್ರವನ್ನು ನಿರ್ವಹಿಸುವ ಶಿಕ್ಷಕರಲ್ಲಿ ಇರುವ ಮೌಲ್ಯಗಳು, ಆದರ್ಶಗಳನ್ನು ಉತ್ತಮ ರಾಷ್ಟ್ರ ನಿರ್ಮಾಣಕ್ಕೆ ಬಳಸುವ ನಿಟ್ಟಿನಲ್ಲಿ "ಸಂಕಲ್ಪ ದಿನಾಚರಣೆ" ಯನ್ನು ಶಾಲೆಯಲ್ಲಿ ಶಾಲೆಯ ಆಡಳಿತ ಮಂಡಳಿ, ಶಿಕ್ಷಕರು, ವಿದ್ಯಾರ್ಥಿಗಳು ಮತ್ತು ಬೆಂಗಳೂರು ಉತ್ತರ ವಲಯ-3ರ ವಿವಿಧ ಶಾಲೆಗಳ ಶಿಕ್ಷಕರೊಂದಿಗೆ ವಿಶಿಷ್ಟ ರೀತಿಯಲ್ಲಿ ಆಚರಿಸಲಾಯಿತು.

ಮಲ್ಲಿಕಾರ್ಜುನ ಸ್ವಾಮಿ ಪ್ರೌಢಶಾಲೆಯ ಶಿಕ್ಷಕಿ ಶ್ರೀಮತಿ ವಿಶಾಲಾಕ್ಷಿ ಆರ್‌ರವರ ಸುಶ್ರಾವ್ಯ ಪ್ರಾರ್ಥನೆಯೊಂದಿಗೆ ಕಾರ್ಯಕ್ರಮ ಪ್ರಾರಂಭವಾಯಿತು. ಕರ್ನಾಟಕ ರಾಜ್ಯಮಾಧ್ಯಮಿಕ ಶಿಕ್ಷಕ ಸಂಘ, ಬೆಂಗಳೂರು ಉತ್ತರ ಜಿಲ್ಲೆಯ ಅಧ್ಯಕ್ಷರಾದ ಶ್ರೀ ಮಲ್ಲಿಕಾರ್ಜುನ ಕೂಡಗಿರವರು ವೇದಿಕೆಯ ಮೇಲೆ ಆಸೀನರಾದ ಗಣ್ಯರನ್ನು ಸಭೆಗೆ ಪರಿಚಯಿಸಿ, ಸಭಾಂಗಣದಲ್ಲಿ ನೆರೆದ ಎಲ್ಲರನ್ನೂ ಸ್ವಾಗತಿಸಿದರು. ವೇದಿಕೆಯ ಮೇಲಿನ ಗಣ್ಯರು ದೀಪ ಪ್ರಜ್ವಲನ ಮಾಡಿ ಶ್ರೀ ಸ್ವಾಮಿ ವಿವೇಕಾನಂದರು ಮತ್ತು ನೇತಾಜಿ ಸುಭಾಷ್ ಚಂದ್ರಭೋಸರ ಭಾವ ಚಿತ್ರಗಳಿಗೆ ಪುಷ್ಪಾರ್ಚನೆ ಮಾಡುವುದರ ಮೂಲಕ ಕಾರ್ಯಕ್ರಮವನ್ನು ಉದ್ಘಾಟನೆ ಮಾಡಿದರು.

ಕರ್ನಾಟಕ ರಾಜ್ಯ ಮಾಧ್ಯಮಿಕ ಶಿಕ್ಷಕ ಸಂಘದ ರಾಜ್ಯ ಖಜಾಂಚಿಗಳಾದ ಶ್ರೀ ಜೆ. ಎಂ ಜೋಷಿರವರು ಪ್ರಾಸ್ತಾವಿಕ ಭಾಷಣದಲ್ಲಿ ಸಂಘದ ಪರಿಚಯವನ್ನು ಮಾಡಿಕೊಡುತ್ತಾ ಪ್ರತಿ ಶೈಕ್ಷಣಿಕ ವರ್ಷದಲ್ಲಿ ಕರ್ನಾಟಕ ರಾಜ್ಯ ಮಾಧ್ಯಮಿಕ ಶಿಕ್ಷಕ ಸಂಘದ ಮುಖಾಂತರ ನಡೆಸುವ ಎಲ್ಲಾ ಚಟುವಟಿಕೆಗಳು ಹಾಗೂ ಕಾರ್ಯಕ್ರಮಗಳ ವಿವರಗಳನ್ನು ನೀಡಿ ಸಭಾಂಗಣದಲ್ಲಿ ನೆರೆದಿರುವ ಶಿಕ್ಷಕರಲ್ಲಿ ಸಂಘದ ಸದಸ್ಯತ್ವ ಪಡೆದುಕೊಳ್ಳುವಂತೆ ಪ್ರೇರೇಪಿಸಿದರು. ಕಾರ್ಯಕ್ರಮದ ನಿರೂಪಣೆಯನ್ನು ಕರ್ನಾಟಕ ರಾಜ್ಯ ಮಾಧ್ಯಮಿಕ ಶಿಕ್ಷಕ ಸಂಘ, ಬೆಂಗಳೂರು ಉತ್ತರ ವಲಯ-3ರ ಅಧ್ಯಕ್ಷರಾದ ಶ್ರೀ ಗಂಗಾಧರ ಎಂ.ವಿರವರು ಉತ್ತಮ ರೀತಿಯಲ್ಲಿ ನಡೆಸಿಕೊಟ್ಟರು. ಕರ್ನಾಟಕ ರಾಜ್ಯ ಮಾಧ್ಯಮಿಕ ಶಿಕ್ಷಕ ಸಂಘದ ರಾಜ್ಯ ಪ್ರಧಾನ ಕಾರ್ಯದರ್ಶಿಗಳಾದ ಶ್ರೀ ಚಿದಾನಂದ ಪಾಟೀಲರು ಎಲ್ಲಾ ಶಿಕ್ಷಕರಿಗೂ ಸಂಕಲ್ಪ ಬೋಧನೆ ಮಾಡಿಸಿದರು.

ಕಾರ್ಯಕ್ರಮದ ಪ್ರಮುಖ ವಕ್ತಾರರಾಗಿ ಆಗಮಿಸಿದ್ದ ಎನ್.ಎಂ.ಕೆ.ಆರ್.ವಿ ಮಹಿಳಾ ಕಾಲೇಜು, ಜಯನಗರದ ಶಿಕ್ಷಣ ವಿಭಾಗದ ಮುಖ್ಯಸ್ಥರಾದ ಡಾ॥ ಲೋಕೇಶ್.ಟಿ.ಎನ್‌ರವರು ನಮ್ಮ ರಾಷ್ಟ್ರದ ಭವ್ಯ ಪರಂಪರೆಯನ್ನು ಸ್ಮರಿಸುತ್ತಾ ರಾಷ್ಟ್ರಕ್ಕಾಗಿ ಶ್ರೀ ಸ್ವಾಮಿ ವಿವೇಕಾನಂದರು ಹಾಗೂ ನೇತಾಜಿ ಸುಭಾಷ್ ಚಂದ್ರಭೋಸರು ತ್ಯಾಗ, ತತ್ವ ಸಿದ್ಧಾಂತಗಳ ಮೂಲಕ ದೇಶಕ್ಕೆ ಕೊಟ್ಟ ಸಂದೇಶಗಳನ್ನು ನೆನಪಿಸಿದರು. ನೇತಾಜಿ ಸುಭಾಷ್ ಚಂದ್ರಭೋಸರು ಜಲಮಾರ್ಗದ ಮುಖೇನ 87 ದಿನಗಳು ಯಾವ ರೀತಿ ಪ್ರಯಾಣಿಸಿ ಬಂದು ಅವರ ಸೇನೆಯನ್ನು ನಿರ್ಮಿಸಿದರು ಎಂಬುದನ್ನು ನೆನಪಿಸಿದರು. ಕಾರ್ಯಕ್ರಮದ ಅಧ್ಯಕ್ಷತೆಯನ್ನು ವಹಿಸಿದ್ದ ಸೆಂಟ್ ಅಲ್ಫೋನ್ಸಸ್ ಸಂಸ್ಥೆಗಳ ವ್ಯವಸ್ಥಾಪಕರಾದ ರೆವೆರೆಂಡ್ ಫಾದರ್ ಡಾ॥ ಜಾನ್ ಮ್ಯಾಥ್ಯೋರವರು ರಾಷ್ಟ್ರ ನಿರ್ಮಾಣದಲ್ಲಿ ಸ್ವಾಮಿ ವಿವೇಕಾನಂದರು ಮತ್ತು ಸುಭಾಷ್ ಚಂದ್ರ ಭೋಸರ ಕರ್ತವ್ಯವನ್ನು ಸ್ಮರಿಸಿದರು ಮತ್ತು ತಮ್ಮ ಸಂಸ್ಥೆಯ ಕರ್ನಾಟಕ ರಾಜ್ಯ ಮಾಧ್ಯಮಿಕ ಶಿಕ್ಷಕ ಸಂಘಕ್ಕೆ ಎಲ್ಲಾ ರೀತಿಯಲ್ಲೂ ಸಹಕರಿಸುವುದಾಗಿ ತಿಳಿಸಿದರು. ಹಾಗೆಯೇ ಕರ್ನಾಟಕ ರಾಜ್ಯ ಮಾಧ್ಯಮಿಕ ಶಿಕ್ಷಕ ಸಂಘದ ಬೆಂಗಳೂರು ಉತ್ತರ ಹಾಗೂ ಗ್ರಾಮಾಂತರ ಜಿಲ್ಲೆಯ ವಿಭಾಗ ಪ್ರಮುಖರಾದ ಶ್ರೀ ಗಂಗಪ್ಪರವರು ಬೆಂಗಳೂರು ಉತ್ತರ ವಲಯ-3ರ ಎಲ್ಲಾ ಪದಾಧಿಕಾರಿಗಳ ಘೋಷಣೆ ಮಾಡಿ ನೂತನ ಪದಾಧಿಕಾರಿಗಳನ್ನು ವೇದಿಕೆಗೆ ಆಹ್ವಾನಿಸಿ ಗೌರವ ಸಮರ್ಪಣೆ ಮಾಡಿದರು. ಕರ್ನಾಟಕ ರಾಜ್ಯ ಮಾಧ್ಯಮಿಕ ಶಿಕ್ಷಕ ಸಂಘ, ಬೆಂಗಳೂರು ಉತ್ತರ ವಲಯ-3ರ ಕಾರ್ಯದರ್ಶಿ ಕಿರಣ್‌ಕುಮಾರ.ಎಸ್‌ರವರು ವಂದನಾರ್ಪಣೆ ನಡೆಸಿಕೊಟ್ಟರು. ಬೆಂಗಳೂರು ಉತ್ತರ ಜಿಲ್ಲೆಯ ಕಾರ್ಯದರ್ಶಿಗಳಾದ ಶ್ರೀ ಹರಿದಾಸ್‌ರವರ ಶಾಂತಿಮಂತ್ರದೊಂದಿಗೆ ಕಾರ್ಯಕ್ರಮ ಮುಕ್ತಾಯವಾಯಿತು.

## ಶ್ರದ್ಧಾಂಜಲಿ

### ಶ್ರೀ ಶಾಂತಕುಮಾರ ಬಿರಾದಾರ



ದಿನಾಂಕ 17.01.23 ರಂದು ಕರ್ನಾಟಕ ರಾಜ್ಯ ಮಾಧ್ಯಮಿಕ ಶಿಕ್ಷಕ ಸಂಘದ ಬೀದರ್ ಜಿಲ್ಲಾ ಅಧ್ಯಕ್ಷರಾಗಿದ್ದ ಶ್ರೀ ಶಾಂತಕುಮಾರ ಬಿರಾದಾರ ರವರು ಹೃದಯಾಘಾತದಿಂದ ನಿಧನರಾದರು. ಅತ್ಯಂತ ಕ್ರಿಯಾಶೀಲರಾಗಿ, ಉತ್ಸಾಹದಿಂದ ಜಿಲ್ಲೆಯ ಎಲ್ಲಾ ಕಾರ್ಯಕರ್ತರನ್ನು ಸಂಘಟನೆಯ ಎಲ್ಲಾ ಕೆಲಸಗಳಲ್ಲಿ ತೊಡಗಿಸುತ್ತಿದ್ದರು. ಆಕಸ್ಮಿಕವಾಗಿ ನಮ್ಮನ್ನೆಲ್ಲಾ ಅಗಲಿರುವುದು ಶಿಕ್ಷಕ ಸಂಘಟನೆಗೆ ತುಂಬಲಾರದ ನಷ್ಟ. ಭಗವಂತನು ಮೃತರ ಆತ್ಮಕ್ಕೆ ಸದ್ಗತಿಯನ್ನು ನೀಡಲಿ ಹಾಗೆಯೇ ಪರಿವಾರದವರಿಗೆ ಈ ದುಃಖವನ್ನು ಸಹಿಸುವ ಶಕ್ತಿಯನ್ನು ನೀಡಲಿ. ಮೃತರ ಪರಿವಾರದೊಂದಿಗೆ ಕರ್ನಾಟಕ ರಾಜ್ಯ ಮಾಧ್ಯಮಿಕ ಶಿಕ್ಷಕ ಸಂಘ ಎಂದೆಂದಿಗೂ ಜೊತೆಯಾಗಿರುತ್ತದೆ.

### ಶ್ರೀ ಚಂದ್ರಶೇಖರ್



ದಿನಾಂಕ 11.01.23 ರಂದು ಶ್ರೀ ಚಂದ್ರಶೇಖರ್, ಖಜಾಂಚಿ, ಬೆಂಗಳೂರು ಉತ್ತರ ಜಿಲ್ಲೆ ಇವರು ಸ್ವರ್ಗಸ್ಥರಾದರೆಂದು ತಿಳಿಸಲು ವಿಷಾದಿಸುತ್ತೇವೆ.

ಸಂಘಟನೆಯಲ್ಲಿ ಕ್ರಿಯಾಶೀಲರಾಗಿ ಕಾರ್ಯ ನಿರ್ವಹಿಸುತ್ತಿದ್ದ ಶ್ರೀಯುತರ ಆತ್ಮಕ್ಕೆ ಭಗವಂತ ಸದ್ಗತಿ ನೀಡಲೆಂದು ಕರ್ನಾಟಕ ರಾಜ್ಯ ಮಾಧ್ಯಮಿಕ ಶಿಕ್ಷಕ ಸಂಘವು ಪ್ರಾರ್ಥಿಸುತ್ತದೆ.

MAG(3)/NPP/23/2020-21 Registered No. RNI 45459/85 Posted at Bangalore PSO Bangalore -560 026
Date of Publishing : 17-01-2023 Date of Posting 20th or 21st of every month Posted at Periodical Rate

# ಚಿತ್ರ ಸುದ್ದಿ



ಬೆಂಗಳೂರು ಉತ್ತರ ಜಿಲ್ಲೆಯಲ್ಲಿ ಕರ್ತವ್ಯಬೋಧ ದಿನಾಚರಣೆ



ಬೆಂಗಳೂರು ದಕ್ಷಿಣ ಜಿಲ್ಲೆಯಲ್ಲಿ ಕರ್ತವ್ಯಬೋಧ ದಿನಾಚರಣೆ



ಹಗರಿಬೊಮ್ಮನಹಳ್ಳಿ, ಕಲಬುರಗಿ, ಬೆಳಗಾವಿಯಲ್ಲಿ ಕರ್ತವ್ಯಬೋಧ ದಿನಾಚರಣೆ



ವಿಜಯಪುರದಲ್ಲಿ ಕರ್ತವ್ಯಬೋಧ ದಿನಾಚರಣೆ



ಕ. ರಾ. ಮಾ. ಶಿ. ಸಂಘದ ಪ್ರಮುಖರಿಂದ ಮಾನ್ಯ ಶಿಕ್ಷಣ ಸಚಿವರಿಗೆ ಮನವಿ

IF UNDELIVERED PLEASE RETURN TO SENDER

Printed By :
J. M. Joshi
Karnataka Rajya Madhyamika Shikshaka Sangha ®.)
Published By:
J. M. Joshi
Karnataka Rajya Madhyamika Shikshaka Sangha (R.)
Owned By : J. M. Joshi
on behalf of Karnataka Rajya Madhyamika Shikshaka Sangha (R.)

Printed At: Rashtrotthana Mudranalaya,
'Keshava Shilpa', Kempegowda Nagar, Bengaluru -560 019

Published By : Karnataka Rajya Madhyamika Shikshaka Sangha (R.)
# 55, 'Yadavasmurthi', 1st Main, Sheshadripuram, Bengaluru -560 020

Editor : J. M. Joshi, Karnataka Rajya Madhyamika Shikshaka Sangha (R.), Bengaluru -20

srushtidesigns@gmail.com